# ಅಧ್ಯಯನ – 6 Study VI

# ಪಾಪ ಪ್ರಾಯಶ್ಚಿತ್ತದ ಮಹಾಯಾಜಕ (ಮಧ್ಯಸ್ತನು)

## ದಾವೀದನ ಮಗನು, ದಾವೀದನ ಪ್ರಭುವು

## The High Priest (Mediator) of the Atonement

## David's Son and David's Lord

**ಹೇಗೆ ದಾವೀದನ ಮಗನು? ಸೊಲೊಮೋನನ ಮೂಲಕವಾಗಿ ಯೋಸೇಫನ ವಂಶಾವಳಿ – ನಾತಾನನ ಮೂಲಕವಾಗಿ ಮರಿಯಳ ವಂಶಾವಳಿ – ಕೆಳಗಿನದ್ದು ಮೇಲೆ ಮಾಡು, ಆ ಮೇಲಿನದನ್ನು ಕೆಳಗೆ ಮಾಡು – ಕ್ರಿಸ್ತನು ದಾವೀದನ ಕರ್ತನೆಂಬ ಬಿರುದನ್ನು ಪಡೆದದ್ದು ಯಾವಾಗ? – ಆತನು ಹೇಗೆ ದಾವೀದನ ಬೇರೂ (ಬುಡವೂ), ಕೊಂಬೆಯೂ ಆಗಿದ್ದಾನೆ? – 'ನಿತ್ಯನಾದ ತಂದೆ' ಎಂಬ ಆತನ ಬಿರುದಿನ ಅರ್ಥ – ಸುರಕ್ಷಿತವಾಗಿರುವುದು ಮತ್ತು ಅನ್ವಯವಾಗುವುದು ಹೇಗೆ? – ಕ್ರಿಸ್ತನ ಮಕ್ಕಳು ಯಾರು? – ಸಭೆಯು ಆತನ ಸಹೋದರರು – ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರ ಮಕ್ಕಳು.**

**"ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ ಮಗನು? ಎಂದು ಪ್ರಶ್ನೆಹಾಕಿದ್ದಕ್ಕೆ ಅವರು ಆತನಿಗೆ – ದಾವೀದನ ಮಗನು ಎಂದು ಹೇಳಲು ಆತನು – ಹಾಗಾದರೆ "ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು" (ಕೀರ್ತನೆ 110:1) ಎಂಬ ಮಾತಿನಲ್ಲಿ ದಾವೀದನು ಪವಿತ್ರಾತ್ಮ ಪ್ರೇರಿತನಾಗಿ ಆತನನ್ನು ಒಡೆಯನು ಅನ್ನುವುದು ಹೇಗೆ? ದಾವೀದನು ಆತನನ್ನು ಒಡೆಯನೆಂದು ಹೇಳಿದ ಮೇಲೆ ಆತನು ಅವನಿಗೆ ಮಗನಾಗುವುದು ಹೇಗೆ? ಅಂದನು – ಮತ್ತಾಯ 22:42–45.**

ಈ ಪ್ರಶ್ನೆಯ ಚರ್ಚೆಯು ನಮ್ಮ ಕರ್ತನ ಅಸ್ತಿತ್ವದ ಪೂರ್ವಸ್ಥಿತಿ ಕುರಿತಾಗಿ ಇರುವುದಲ್ಲ, ಆದರೆ ಅದು ಕೇವಲ ಮಾನವ ಕುಟುಂಬದ ಬಗ್ಗೆ ಆತನಿಗಿರುವ ಸಂಬಂಧದ ಕುರಿತಾಗಿದೆ ಎಂಬುದನ್ನು ನಾವು ಮೊಟ್ಟಮೊದಲಿಗೆ ಗಮನಿಸತಕ್ಕದ್ದು. ನಾವು ನೋಡುವಂತೆ, ಯೇಸು ತನ್ನ ತಾಯಿಯಾದ ಮರಿಯಳಲ್ಲಿ ಮಾನವ ರೂಪವನ್ನು ಧರಿಸಿ ಗರ್ಭತಾಳಿದ್ದರಿಂದ ಆತನು ಮಾನವ ಕುಟುಂಬದೊಂದಿಗೆ ಸಂಬಂಧ ಹೊಂದಿದವನಾಗಿದ್ದಾನೆ. ಲೂಕನ ಪ್ರಕಾರವಾಗಿ ಮರಿಯಳ ವಂಶಾವಳಿಯು ದಾವೀದನ ಮಗನಾದ ನಾತಾನನ ಮೂಲಕವಾಗಿ ದಾವೀದನವರೆಗೆ ಹಿಂದಕ್ಕೆ ಹೋಗುವುದಾಗಿದೆ (ಲೂಕ 3:31*). ಮತ್ತಾಯನ ಪ್ರಕಾರವಾಗಿ ಯೋಸೇಫನ ವಂಶಾವಳಿಯು ದಾವೀದನ ಮಗನಾದ ಸೊಲೊಮೋನನ ಮೂಲಕ ಪುನಃ ದಾವಿದನವರೆಗೆ ಹಿಂದಕ್ಕೆ ಹೋಗುವುದಾಗಿದೆ (ಮತ್ತಾಯ 1:6,16). ಯೋಸೇಫನು ಮರಿಯಳನ್ನು ತನ್ನ ಹೆಂಡತಿಯನ್ನಾಗಿ ಸ್ವೀಕರಿಸಿದ್ದಲ್ಲದೆ ಆಕೆಯ ಮಗನಾದ ಯೇಸುವನ್ನು ತನ್ನ ಸ್ವಂತ ಮಗನೋ ಎಂಬಂತೆ ದತ್ತು ಪಡೆದನು. ಈ ದತ್ತುಸ್ವೀಕಾರದ ಕಾರಣ ಯೇಸುವನ್ನು ಯೋಸೇಫನ ವಂಶಾವಳಿಯಲ್ಲಿ ಗುರುತಿಸಲಾಗಿದೆ. ಅದರೆ ಈ ವಂಶಾವಳಿಯ ಮೂಲಕ ಆತನನ್ನು ದಾವೀದನ ವಂಶದವನು ಎಂದು ಗುರುತಿಸುವ ಅಗತ್ಯವಿಲ್ಲ. ಯಾಕೆಂದರೆ, ಯೇಸುವಿನ ತಾಯಿಯಾದ ಮರಿಯಳೂ ಸಹಾ ದಾವೀದನ ಮಗನಾದ ನಾತಾನನ ಮೂಲಕವಾಗಿ ದಾವೀದನ ವಂಶಕ್ಕೆ ಸೇರಿದವಳೇ ಆಗಿದ್ದಾಳೆ.

ಆದರೆ, ಇಸ್ರಾಯೇಲಿನ ಸಿಂಹಾಸನಕ್ಕೆ ನಮ್ಮ ಕರ್ತನ ಹಕ್ಕಿನ ಕೇಳಿಕೆಯು ಕೆಲವರು ನೆನಸುವಂತೆ ಆತನ ತಾಯಿಯಾದ ಮರಿಯಳಿಗೆ ಯೋಸೇಫನೊಡನೆ ಇರುವ ಸಂಬಂಧದ ಮೇಲೆ ಆತುಕೊಂಡಿಲ್ಲ. ವ್ಯತಿರಿಕ್ತವಾಗಿ ಆತನು ಯೋಸೇಫನ ಮಗನಾಗಿರುತ್ತಿದ್ದರೆ ಆತನನ್ನು ದಾವೀದನ ಸಿಂಹಾಸನಕ್ಕೆ ಪಿತ್ರಾರ್ಜಿತವಾದ ಹಕ್ಕಿನಿಂದ ಬಹಿಷ್ಕರಿಸಲಾಗುತ್ತಿತ್ತು. ಯಾಕೆಂದರೆ, ದಾವೀದನ ಸಿಂಹಾಸನಕ್ಕೆ ಉತ್ತರಾಧಿಕಾರಿಗಳು ಆತನ ಮಗನಾದ ಸೊಲೊಮೋನನಿಂದ ಬಂದವರಾಗಿದ್ದು, ಯಾರೂ ನಾತಾನನ ಮೂಲಕ ಬಂದವರಲ್ಲ. ಪರಂತು, ದಾವೀದನ ಮಹಾ ವಾರಸುದಾರನು ಸೊಲೊಮೋನನ ರಾಜ ವಂಶಸ್ಥನಾಗಿರ ಬಾರದು ಎಂದು ಕೆಲವೊಂದು ದೇವರ ವಾಕ್ಯಗಳು ನಿರ್ದಿಷ್ಟವಾಗಿ ಸೂಚಿಸುವುದಾಗಿದೆ. ನಾವು ಇದನ್ನು ನಿರೂಪಿಸುವುದಾದರೆ, ಇದು ನಮ್ಮ ಕರ್ತನು ಯೋಸೇಫನ ಮತ್ತು ಮರಿಯಳ ಮಗನೇ ಇರಬೇಕು ಎಂದು ಕೆಲವರು ಮಾಡುವ ಹಕ್ಕಿನ ಹೇಳಿಕೆಗೆ ಪರಿಣಾಮಕಾರಿಯಾದ ಅಡಚಣೆಯಾಗುತ್ತದೆ. ಆದುದರಿಂದ, ನಾವು ಈ ವಿಷಯವನ್ನು ಬಲು ಜಾಗರೂಕತೆಯಿಂದ ಪರೀಕ್ಷಿಸೋಣ.

* ಇಲ್ಲಿ ಯೋಸೇಫನು ಹೇಲಿಯ ಮಗನು ಎಂದು ಹೇಳಲಾಗಿದೆ. ಆದರೆ ಹೇಲಿಯು ಮರಿಯಳ ತಂದೆಯಾಗಿದ್ದಾನೆ, ಹೀಗಾಗಿ ಯೋಸೇಫನು ಹೇಲಿಯ ಕಾನೂನು ಸಕ್ರಮ ಸಂಬಂಧದ ಮಗನು (ಸನ್– ಇನ್– ಲಾ = ಅಳಿಯ) ಎಂದು ತಿಳಿದುಕೊಳ್ಳಬೇಕು. ಜನನದಲ್ಲಿ ಯೋಸೇಫನು ಯಾಕೋಬನ ಮಗನು (ಮತ್ತಾಯ 1:16).

ಮೊದಲನೆಯದಾಗಿ, ಈ ಲೋಕ ಸಿಂಹಾಸನದ ಮಹಾ ವಾರಸುದಾರನು, ಇಸ್ರಾಯೇಲಿನ ಮಹಾ ಅರಸನು ದಾವೀದನ ಸಂತತಿಯವನೇ ಆಗಿರಬೇಕು ಎಂದು ದೈವಿಕ ಪ್ರಸ್ತಾಪಗಳು ಸ್ಪಷ್ಟವಾಗಿಯೂ ಸಂಶಯಾತೀತವಾಗಿಯೂ, ಪ್ರಶ್ನಾತೀತವಾಗಿಯೂ ಹೇಳುತ್ತವೆ. ಎರಡನೆಯದಾಗಿ, ಆತನು ಸೊಲೊಮೋನನ ವಂಶದಿಂದ ಅಂದರೆ ಆಳುವವರ ವಂಶದಿಂದ ಕೆಲವೊಂದು ಶರತ್ತುಗಳಿಗನು ಸಾರವಾಗಿ ಬಂದವನಾಗಿರಬೇಕು ಎಂದು ಪ್ರಕಟಿಸಲಾಗಿದೆ. ಆ ಶರತ್ತುಗಳು ನೆರವೇರುವುದಾದರೆ ಮಾತ್ರ ಆತನು ಆ ವಂಶದಲ್ಲಿ ಹುಟ್ಟಿ ಬರುತ್ತಾನೆ. ಆದರೆ, ಈ ಶರತ್ತುಗಳು ನೆರವೇರದೇ ಹೋದಲ್ಲಿ ಆತನು ಮತ್ತೊಂದು ವಂಶದಲ್ಲಿ ಹುಟ್ಟಿಬರುತ್ತಾನೆ. ಆದರೆ, ಏನೇ ಆಗಲಿ ಆತನು ದಾವೀದನ ವಂಶದಲ್ಲಿಯೇ ಜನಿಸಿಬರುತ್ತಾನೆ. ಆತನು ದಾವೀದನ ಮಗನೂ, ಅದೇ ಸಮಯದಲ್ಲಿ ದಾವೀದನ ಒಡೆಯನೂ ಆಗಿದ್ದಾನೆ.

ಈ ಕೆಳಗಣ ದೇವರ ವಾಕ್ಯದ ಹೇಳಿಕೆಗಳನ್ನು ಗಮನಿಸಿರಿ :

**"ಕರ್ತನು ದಾವೀದನಿಗೆ ಮಾಡಿದ ಪ್ರಮಾಣವು ಸ್ಥಿರವಾಗಿದೆ. ಆತನು ಅದನ್ನು ಬದಲಿಸುವುದಿಲ್ಲ – ನಿನ್ನ ಸಂತಾನದವರನ್ನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು. ನಿನ್ನ ಮಕ್ಕಳು ನನ್ನ ನಿಬಂಧನೆಯನ್ನೂ ನಾನು ಆಜ್ಞಾಪಿಸಿದ ಕಟ್ಟಳೆಗಳನ್ನೂ ಕೈಕೊಂಡು ನಡೆಯುವುದಾದರೆ ಅವರ ಮಕ್ಕಳು ನಿನ್ನ ಸಿಂಹಾಸನದಲ್ಲಿ ಸದಾಕಾಲ ಕೂತುಕೊಳ್ಳುವರು" (ಕೀರ್ತನೆ 132 :11,12)**.

**"ನನಗೆ ದಯಪಾಲಿಸಿದ ಅನೇಕ ಮಂದಿ ಮಕ್ಕಳಲ್ಲಿ ನನ್ನ ಮಗನಾದ ಸೊಲೊಮೋನನನ್ನು ಕರ್ತನ ರಾಜ್ಯ ಸಿಂಹಾಸನವಾಗಿರುವ ಇಸ್ರಾಯೇಲ್ ಸಿಂಹಾಸನದ ಮೇಲೆ ಕುಳ್ಳಿರಿಸುವುದಕ್ಕೋಸ್ಕರ ಆರಿಸಿಕೊಂಡನು. ಆತನು ನನಗೆ – ನಿನ್ನ ಮಗನಾದ ಸೊಲೊಮೋನನೇ ನನ್ನ ಆಲಯವನ್ನೂ ಅದರ ಪ್ರಾಕಾರಗಳನ್ನು ಕಟ್ಟಿಸುವನು. ಅವನು ನನಗೆ ಮಗನಾಗಿರಬೇಕೆಂದು ಅವನನ್ನು ಆರಿಸಿಕೊಂಡಿದ್ದೇನೆ; ನಾನು ಅವನಿಗೆ ತಂದೆಯಾಗಿರುವೆನು; ಅವನು ಈಗಿನಂತೆ ಯಾವಾಗಲೂ ನನ್ನ ಆಜ್ಞಾವಿಧಿಗಳನ್ನು ಕೈಕೊಂಡು ನಡೆಯುವುದಾದರೆ ಅವನ ರಾಜ್ಯವನ್ನು ಸದಾಕಾಲವೂ ಸ್ಥಿರಪಡಿಸುವೆನೆಂದು ಹೇಳಿದ್ದಾನೆ "** – 1 ಪೂರ್ವ 28: 5–7.

**"ಮತ್ತು ಕರ್ತನು –ನಿನ್ನ ಸಂತಾನದವರು ನಂಬಿಗಸ್ತರಾಗಿ ಪೂರ್ಣ ಮನಸ್ಸಿನಿಂದಲೂ, ಪೂರ್ಣಪ್ರಾಣದಿಂದಲೂ ನನಗೆ ನಡೆದುಕೊಳ್ಳುವುದರಲ್ಲಿ ಜಾಗರೂಕರಾಗಿರುವುದಾದರೆ ಅವರು ತಪ್ಪದೆ ಇಸ್ರಾಯೇಲ್ ಸಿಂಹಾಸನದ ಮೇಲೆ ಕೂತುಕೊಳ್ಳುವರು ಎಂಬುದಾಗಿ ತಾನು ನನಗೆ ಮಾಡಿದ ವಾಗ್ದಾನವನ್ನು ಸ್ಥಿರಪಡಿಸುವೆನು"** – 1 ಅರಸು 2:4.

ಸೊಲೊಮೋನನ ವಂಶಾವಳಿಯಲ್ಲಿ ಮೆಸ್ಸೀಯನ ರಾಜ್ಯದ ವಾಗ್ದಾನವನ್ನು ದೇಹಕ್ಕನುಸಾರವಾದ ಆತನ ಮುಂದಿನ ಪೀಳಿಗೆಯಲ್ಲಿ ಈ ರೀತಿಯಾಗಿ ಸ್ಪಷ್ಟವಾಗಿಯೂ, ವಿಶಿಷ್ಟಪ್ರಕಾರವಾಗಿಯೂ ದೇವರಿಗೆ ಕೆಲವೊಂದು ರೀತಿಯ ನಿಷ್ಠೆಯನ್ನೊಳಗೊಂಡ ಷರತ್ತುಬದ್ಧವನ್ನಾಗಿ ಮಾಡಲಾಯಿತು. ವಿವಿಧ ಭಾಷೆಗಳ ಅರ್ಥವಿವರಣೆ ಗಳನ್ನೊಳಗೊಂಡಂತೆ ಇದರ ತೊಡಗಿಸುವಿಕೆಯೆಂದರೆ ಯಾವುದೇ ರೀತಿಯಲ್ಲಿ ದೇವರಿಗೆ ತೋರುವ ಅಪ್ರಮಾಣಿಕತೆಯು ಸೊಲೊಮೋನನ ಪೀಳಿಗೆಯವರನ್ನು ಮೆಸ್ಸಿಯನ ರಾಜ್ಯಭಾರಕ್ಕೆ ಸಂಬಂಧಿಸಿದ ಆತನ ಸಿಂಹಾಸನದ ಉತ್ತರಾಧಿಕಾರಿಗಳಾಗಲು ದೇಹ ಸಂಬಂಧದಲ್ಲಿ ಅಡ್ಡಿಪಡಿಸುವುದಾಗಿದೆ. ಹೀಗಿರುವುದರಿಂದ, ಸೊಲೊಮೋನನಾಗಲೀ ಮತ್ತು ಇಸ್ರಾಯೇಲಿನ ಸಿಂಹಾಸನದ ಆತನ ಉತ್ತರಾಧಿಕಾರಿಗಳಾಗಲೀ "ದೇವರ ಮಾರ್ಗದಲ್ಲಿ ಸತ್ಯದಿಂದಲೂ, ಅವರ ಪೂರ್ಣ ಮನಸ್ಸಿನಿಂದಲೂ, ಪೂರ್ಣ ಪ್ರಾಣದಿಂದಲೂ ನಡೆಯುವದಕ್ಕೆ ಗಮನ ಕೊಟ್ಟರೋ?" ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅವರು ಹಾಗೆ ಮಾಡಲಿಲ್ಲವಾದರೆ, ಅವರುಗಳು ದೈಹಿಕವಾಗಿ ಮೆಸ್ಸಿಯನ ವಂಶಾವಳಿ ಯವರಾಗಲು ಪ್ರತಿಬಂಧಿಸಲ್ಪಟ್ಟಿದ್ದಾರೆ.

ಈ ಪ್ರಶ್ನೆಗೆ ಉತ್ತರವನ್ನು ನಿಶ್ಚಿತಪಡಿಸುವುದಕ್ಕಾಗಿ ನಾವು ಪುನಃ ದೇವರ ವಾಕ್ಯಗಳ ಮೊರೆ ಹೋಗಬೇಕಾಗುತ್ತದೆ. ಅಲ್ಲಿ ನಾವು ಯಾವುದೇ ತಪ್ಪಿಲ್ಲದೆ ಸೊಲೊಮೋನನು ಮತ್ತು ಆತನ ರಾಜ ವಂಶಸ್ಥರು ದೇವರ ನಿಯಮಗಳಿಗನುಸಾರ ನಡೆಯಲು ವಿಫಲರಾಗಿದ್ದಾರೆ ಎಂದು ನೋಡುತ್ತೇವೆ. ಆದುದರಿಂದ ಆ ಪೀಳಿಗೆಯವರು ಮೆಸ್ಸೀಯನ ವಂಶಾವಳಿಯಿಂದ ಕಿತ್ತುಹಾಕಲ್ಪಟ್ಟವರಾಗಿದ್ದಾರೆ ಎಂಬುದು ನಿಶ್ಚಯವಾಗುತ್ತದೆ. ಹಾಗಿರುವುದರಿಂದ ಮೆಸ್ಸೀಯನು ದಾವೀದನ ಮತ್ತೊಂದು ವಂಶಾವಳಿಯಲ್ಲಿ ಬರಬೇಕಾಗುತ್ತದೆ. ನಮ್ಮ ಕರ್ತನ ಮಾತುಗಳನ್ನು ಕೇಳಿಸಿಕೊಳ್ಳಿರಿ :

**"ನನ್ನ ಮಗನಾದ ಸೊಲೊಮೋನನೇ, ನೀನಂತೂ ನಿನ್ನ ತಂದೆಯ ದೇವರನ್ನು ಅರಿತುಕೊಂಡು ಸಂಪೂರ್ಣ ಹೃದಯದಿಂದಲೂ ಮನಸ್ಸಂತೋಷದಿಂದಲೂ ಆತನನ್ನೇ ಸೇವಿಸು; ಕರ್ತನು ಎಲ್ಲಾ ಹೃದಯಗಳನ್ನು ವಿಚಾರಿಸುವವನೂ ಎಲ್ಲಾ ಮನಸ್ಸಂಕಲ್ಪಗಳನ್ನು ಬಲ್ಲವನೂ ಆಗಿರುತ್ತಾನಲ್ಲಾ. ನೀನು ಆತನನ್ನು ಹುಡುಕುವುದಾದರೆ ಆತನು ನಿನಗೆ ಸಿಕ್ಕುವನು; ಆತನನ್ನು ಬಿಟ್ಟರೆ ನಿನ್ನನ್ನು ಶಾಶ್ವತವಾಗಿ ತಳ್ಳಿಬಿಡುವನು"** – 1 ಪೂರ್ವ 28:9.

**"ಇಸ್ರಾಯೇಲ್ ದೇವರಾದ ಕರ್ತನು ಸೊಲೊಮೋನನಿಗೆ ಎರಡು ಸಾರಿ ಕಾಣಿಸಿಕೊಂಡು ಅನ್ಯದೇವತೆಗಳನ್ನು ಸೇವಿಸಲೇ ಬಾರದೆಂದು**

**ಅಜ್ಞಾಪಿಸಿದ್ದರೂ ಅವನು ಆತನ ಆಜ್ಞೆಗಳನ್ನು ಮೀರಿದ್ದರಿಂದ ಆತನು ಅವನ ಮೇಲೆ ಕೋಪಗೊಂಡು ಅವನಿಗೆ – ನೀನು ಈ ಪ್ರಕಾರ ಮಾಡಿ ನನ್ನ ವಿಧಿನಿಬಂಧನೆಗಳನ್ನು ಮೀರಿದ್ದರಿಂದ ನಿನ್ನ ರಾಜ್ಯವನ್ನು ಕಿತ್ತುಕೊಂಡು ನಿನ್ನ ಸೇವಕನಿಗೆ ಕೊಡುವೆನು. ಆದರೂ ನಾನು ನಿನ್ನ ತಂದೆಯಾದ ದಾವೀದನನ್ನು ನೆನಸಿ ನಿನ್ನ ಕಾಲದಲ್ಲಿ ಇದನ್ನು ಮಾಡುವುದಿಲ್ಲ. ನಿನ್ನ ಮಗನ ಕೈಯಿಂದ ಅದನ್ನು ಕಿತ್ತುಕೊಳ್ಳುವೆನು. ಆದರೆ ರಾಜ್ಯವನ್ನೆಲ್ಲಾ ಕಿತ್ತುಕೊಳ್ಳುವುದಿಲ್ಲ; ನನ್ನ ಸೇವಕನಾದ ದಾವೀದನಿಗೋಸ್ಕರವೂ ನಾನು ಆರಿಸಿಕೊಂಡ ಯೆರೂಸಲೇಮ್ ಪಟ್ಟಣಕ್ಕೋಸ್ಕರವೂ ನಿನ್ನ ಮಗನಿಗೆ ಒಂದು ಕುಲವನ್ನು ಉಳಿಸುವೆನು ಎಂದು ಹೇಳಿದನು"** – 1 ಅರಸು 11: 9–13.

ಇದಕ್ಕೆ ಸಾಮರಸ್ಯವೆಂಬಂತೆ, ಹತ್ತು ಕುಲಗಳು ಸೊಲೊಮೋನನ ಮರಣಾನಂತರ ಆತನ ಪೀಳಿಗೆಯಿಂದ ನೇರವಾಗಿ ಬಿರುಕುಬಿಟ್ಟವು. ಹತ್ತು ಕುಲಗಳು ಸೊಲೊಮೋನನ ಮಗನೂ, ಆತನ ಉತ್ತರಾಧಿಕಾರಿಯೂ ಆದ ರೆಹಬ್ಬಾಮನಿಗೆ ಎಂದಿಗೂ ಸ್ವಾಮಿನಿಷ್ಠೆಯನ್ನು ತೋರಲಿಲ್ಲ. ಆದರೆ, ನಾವು ಯೂದ ಕುಲದ ಬಗ್ಗೆ ಮತ್ತು ಅದರ ಜೊತೆಯಾಗಿರುವ ಬೆನ್ಯಾಮೀನ್‌ರ ಬಗ್ಗೆ ಕರ್ತನ ಮಾತುಗಳನ್ನು ಕೇಳಿಸಿಕೊಳ್ಳೋಣ. ಅದು ಕೆಲವು ಸಮಯದವರೆಗೆ ಸೊಲೊಮೋನನ ಪೀಳಿಗೆಗೆ ನಿಷ್ಠೆಯುಳ್ಳದ್ದಾಗಿತ್ತು. ಈ ರೀತಿಯಲ್ಲಿ ಅದು ವಾಗ್ದತ್ತವಾದ ಪ್ರತಿರೂಪವಾದ ರಾಜ್ಯಕ್ಕೆ, ಅದರ ಮಹಾ ಅರಸನಾದ ಮೆಸ್ಸೀಯನಿಗೆ ಸುವ್ಯಕ್ತವಾಗಿ ಸಂಬಂಧಿಸಿತ್ತು. ಸೊಲೊಮೋನನ ಸಿಂಹಾಸನದ ಮೇಲೆ ಕುಳಿತ ಆತನ ಪೀಳಿಗೆಯ ಕಡೆಯ ಮೂರು ರಾಜರುಗಳು ಯೆಹೋಯಾಕೀಮ್, ಯೆಹೋಯಾಕೀನ್ (ಕೊನ್ಯ) ಮತ್ತು ಆತನ ತಮ್ಮನಾದ ಚಿದ್ಕೀಯ ಇವರುಗಳು. ಇವರ ವಿರುದ್ಧವಾದ ನಮ್ಮ ಕರ್ತನ ಸಾಕ್ಷ್ಯವನ್ನು ಮತ್ತು ಅವರ ಪೀಳಿಗೆಯವರಲ್ಲಿ ಯಾರೂ ಇನ್ನು ಮುಂದೆ ವಾಸ್ತವವಾದ ಮತ್ತು ಪ್ರತಿರೂಪವಾದ ಕರ್ತನ ಸಿಂಹಾಸನದಲ್ಲಿ ಕುಳಿತುಕೊಳ್ಳಲಾರರು ಎಂಬ ಭರವಸೆಯ ಮಾತುಗಳನ್ನು ನಾವು ಗುರುತುಮಾಡಿಕೊಳ್ಳೋಣ. ನಾವೂ ಹೀಗೆ ಓದುತ್ತೇವೆ :–

**"ಕರ್ತನು ಇಂತೆನ್ನುತ್ತಾನೆ – ನನ್ನ ಜೀವದಾಣೆ. ಯೆಹೋಯಾಕೀಮನ ಮಗನೂ ಯೆಹೂದದ ಅರಸನೂ ಆದ ಕೊನ್ಯನೆಂಬ ನೀನು ನನ್ನ ಬಲಗೈಯ ಮುದ್ರೆಯುಂಗುರವಾಗಿದ್ದರೂ ನಾನು ನಿನ್ನನ್ನು ಅಲ್ಲಿಂದ ಕಿತ್ತುಹಾಕುತ್ತಿದ್ದೆನು! . . . . ಕೊನ್ಯನೆಂಬ ಈ ಮನುಷ್ಯನು ಅಸಡ್ಡೆಗೀಡಾದ ಒಡಕು ಗಡಿಗೆಯೋ? ಯಾರಿಗೂ ಇಷ್ಟವಿಲ್ಲದ ಮಡಕೆಯೋ? ಅವನೂ ಅವನ ಸಂತತಿಯವರು ಯಾಕೆ ಬಿಸಾಡಲ್ಪಟ್ಟಿದ್ದಾರೆ? ನೋಡದ ದೇಶಕ್ಕೆ ಏಕೆ ಎಸೆಯಲ್ಪಟ್ಟಿದ್ದಾರೆ? ದೇಶವೇ, ದೇಶವೇ, ದೇಶವೇ ಕರ್ತನ ಮಾತನ್ನು ಕೇಳು! ಕರ್ತನು ಇಂತೆನ್ನುತ್ತಾನೆ– ಇವನನ್ನು ಮಕ್ಕಳಿಲ್ಲದವನು, ವ್ಯರ್ಥಜನ್ಮದವನು ಎಂದು ಪಟ್ಟಿಯಲ್ಲಿ ಬರೆಯಿರಿ; ಇವನ ಸಂತಾನದಲ್ಲಿ ಇನ್ನು ಮೇಲೆ ಯಾವನೂ ದಾವೀದನ ಸಿಂಹಾಸನದ ಮೇಲೆ ಕೂತು ಯೆಹೂದವನ್ನು ಆಳಿ ಬಾಳನು"** – ಯೆರೆಮೀಯ 22:24–30.

**"ಯೆಹೂದದ ಅರಸನಾದ ಯೆಹೋಯಾಕೀಮನ ವಿಷಯದಲ್ಲಿ ಕರ್ತನು ಇಂತೆನ್ನುತ್ತಾನೆ – ಇವನ ಸಂತಾನದಲ್ಲಿ ಯಾವನೂ ದಾವೀದನ ಸಿಂಹಾಸನಾರೂಢನಾಗನು; ಇವನ ಹೆಣವು ಬಿಸಾಡಲ್ಪಟ್ಟು ಹಗಲಿನ ತಾಪಕ್ಕೂ ರಾತ್ರಿಯ ಚಳಿಗೂ ಈಡಾಗುವುದು"** – ಯೆರಮೀಯ 36:30.

ಚಿದ್ಕೀಯನ ಬಗ್ಗೆ ನಾವು ಓದುವುದೇನೆಂದರೆ :–

**"ಇಸ್ರಾಯೇಲಿನ ದೊರೆಯೇ, ದುಷ್ಟನೇ, ಭ್ರಷ್ಟನೇ! ನಿನಗೆ ಸಮಯವು ಹತ್ತರಿಸಿದೆ; ಇದೇ ನಿನ್ನ ಅಪರಾಧದ ಕಡೆಗಾಲ. ಕರ್ತನಾದ ದೇವರು ಇಂತೆನ್ನುತ್ತಾನೆ – ಮುಂಡಾಸವನ್ನು ಕಿತ್ತು ಬಿಡು! ಕಿರೀಟವನ್ನು ಎತ್ತಿ ಹಾಕು! ಎಲ್ಲವೂ ವ್ಯತ್ಯಸ್ತವಾಗಲಿ ; ಕೆಳಗಿದನ್ನು ಮೇಲೆ ಮಾಡು, ಮೇಲಿನದನ್ನು ಕೆಳಗೆ ಮಾಡು; ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, ದೊಬ್ಬಿಬಿಡುವೆನು ; ರಾಜ್ಯಕ್ಕೆ ಬಾಧ್ಯನು ಬರುವುದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು"** – ಯೆಹೆಜ್ಕೇಲ 21: 25–27.

ಇಲ್ಲಿ ಸೊಲೊಮೋನನ ಸಮಗ್ರ ಸಂತತಿಯವರ ಉರುಳಿಹೋಗುವಿಕೆಯನ್ನು ಪ್ರಕಟಿಸಲಾಗಿದೆ : ಇದೇ ಸಂತತಿಯನ್ನು ಮೇಲಕ್ಕೆತ್ತಲಾಗಿತ್ತು. ಆ ತರುವಾಯ ಈಗ ಇದನ್ನು ಕೆಳಗಿಳಿಸಲಾಗುತ್ತಿದೆ, ಅದೇ ಸಮಯದಲ್ಲಿ ಸಿಂಹಾಸನಕ್ಕೆ ಎಂದೂ ಹಕ್ಕುಹೂಡದ ನಾತಾನನ ಹೀನೈಸಿದ ಅಥವಾ ಅಗೋಚರ ಪೀಳಿಗೆಯನ್ನು ಮರಿಯಳಲ್ಲಿ ದೇಹ ಧರಿಸಿದ ಅದರ ಪ್ರತಿನಿಧಿಯಾದ ಮೆಸ್ಸೀಯನ ಮೂಲಕವಾಗಿ ಎತ್ತಲ್ಪಡುತ್ತಿದೆ.

ಮೆಸ್ಸೀಯನನ್ನು ಸೊಲೊಮೋನನ ಪೀಳಿಗೆಯಲ್ಲಿ ನಿರೀಕ್ಷಿಸ ಬಾರದು ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಸಕರಾತ್ಮಕವಾದ ಸಾಕ್ಷ್ಯವನ್ನು ಯಾರು ಕೇಳಿಯಾರು? – ಆ ಪೀಳಿಗೆಯ ಎಲ್ಲಾ ಹಕ್ಕುಗಳು ಮತ್ತು ಹಕ್ಕಿನ ಕೇಳಿಕೆಗಳು, ದೇವರ ವಾಗ್ದಾನಗಳ ಮತ್ತು ಶರತ್ತುಗಳಿಗನುಸಾರವಾಗಿ ಇರದೆ ಅವರ ಕೆಟ್ಟತನಗಳಿಂದಲೂ, ದೇವರ ವಿರುದ್ಧವಾದ ದಂಗೆಗಳಿಂದಲೂ ಕಳೆದುಕೊಳ್ಳಬೇಕಾಯಿತು. ಆದುದರಿಂದ ನಮ್ಮ ಕರ್ತನು ಯೋಸೇಫನ ಮಗನಾಗಿದ್ದಿರಬಹುದು ಎಂಬ ಹೇಳಿಕೆಯು ಸಂಪೂರ್ಣವಾಗಿ ಸುಳ್ಳಾಗಿದೆ ಎಂದು ರುಜುವಾತಾಗುತ್ತದೆ. ಯಾಕೆಂದರೆ ಆ ಪೀಳಿಗೆಯಲ್ಲಿ ಯಾರೂ ಎಂದಿಗೂ ಕರ್ತನ ಸಿಂಹಾಸನದಲ್ಲಿ ಕುಳಿತುಕೊಳ್ಳಲಾರರು.

ರಾಜ್ಯಭಾರವು ಸಾಲೋಮೋನನ ರೆಂಬೆಯಿಂದ ದಾವೀದನ ವಂಶವೃಕ್ಷದ ಮತ್ತೊಂದು ರೆಂಬೆಗೆ ವರ್ಗಾವಣೆಯಾದದ್ದನ್ನು ಸ್ಪಷ್ಟವಾಗಿ ಇನ್ನಿತರ ದೇವರ ವಾಕ್ಯಗಳಲ್ಲಿಯೂ ಮುಂತಿಳಿಸಲಾಗಿತ್ತು. ನಾವು ಓದುವಂತೆ – **"ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು; ಅವನು ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿ ನ್ಯಾಯಗಳನ್ನು ನಿರ್ವಹಿಸುವನು"** – ಯೆರೆಮೀಯ 23:5 (ನೋಡಿ Young's ಅನುವಾದ).

ಯೇಸುವಿನ ತಾಯಿಯಾದ ಮರಿಯಳು, ಈ ಯುಕ್ತವಾದ ಆಲೋಚನೆಗೆ ಕಟ್ಟುಬಿದ್ದಳೆಂದು ತೋರುತ್ತದೆ ಅಥವಾ ಆಕೆ ಲೂಕನ ಸುವಾರ್ತೆಯಲ್ಲಿ (ಲೂಕ 1:46–55) ಕಂಡುಬರುವ **'ಸ್ತುತಿಗೀತೆ'**ಯನ್ನು ಪ್ರವಾದನೀಯವಾಗಿ ಹೇಳುವಾಗ ಪವಿತ್ರಾತ್ಮ ಭರಿತಳಾಗಿದ್ದಳೆಂದು ಕಂಡುಬರುತ್ತದೆ. ಇಲ್ಲಿ **"ಆತನು (ದೇವರು) ತನ್ನ ಭುಜಪರಾಕ್ರಮವನ್ನು ತೋರಿಸಿ, ಸೊಕ್ಕಿದ ಮನಸುಳ್ಳವರನ್ನು ಚದುರಿಸಿಬಿಟ್ಟಿದ್ದಾನೆ. ಪ್ರಭುಗಳನ್ನು ಸಿಂಹಾಸನದಿಂದ ದೊಬ್ಬಿ ದೀನ ಸ್ಥಿತಿಯವರನ್ನು ಉನ್ನತ ಸ್ಥಿತಿಗೆ ತಂದಿದ್ದಾನೆ. ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿ ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸಿ ಬಿಟ್ಟಿದ್ದಾನೆ"** (ಲೂಕ 1:51–53). ಈ ವಚನಗಳಲ್ಲಿ ಸೊಲೊಮೋನನ ಪೀಳಿಗೆಯ ಕೃಪಾಪಾತ್ರ ಕುಟುಂಬಕ್ಕೂ ನಾತಾನನ ಪೀಳಿಗೆಯ ದೀನಸ್ಥಿತಿಯುಳ್ಳ ಕುಟುಂಬಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಲಾಗಿದೆ. ಕಿರೀಟ ಮತ್ತು ಮುಕುಟವನ್ನು ಚಿದ್ಕೀಯನಿಂದ, ಹೀಗೆ ಸೊಲೊಮೋನನ ಪೀಳಿಗೆಯವರಿಂದ ತೆಗೆದು ಅದನ್ನು ಅದರ ಹಕ್ಕುಳ್ಳ ದಾವೀದನ ಬುಡದ ನೀತಿವಂತ ಕೊಂಬೆಗೆ ನೀಡಲಾಗಿದೆ.

ನಮ್ಮ ಕರ್ತನು ಯಾವ ರೀತಿಯಲ್ಲಿ ದಾವೀದನ ಕೊಂಬೆಯೂ, ಸಂತಾನವೂ ಅಥವಾ ದಾವೀದನ ಮಗನೂ ಆಗಿದ್ದಾನೆ ಎಂಬುದನ್ನು ನೋಡಿದ್ದೇವೆ. ಆತನ ವಂಶಾವಳಿಯ ಪೀಳಿಗೆಯಲ್ಲಿ ಇದನ್ನು ಸೂಕ್ತರೀತಿಯಲ್ಲಿ ಕಂಡುಕೊಳ್ಳಬಹುದು ಮತ್ತು ಇದು ಈ ಸಂಬಂಧವಾದ ದೇವರ ವಾಕ್ಯಗಳಿಗನುಸಾರವಾಗಿಯೇ ಇದೆ. ಆತನು ಯಾವ ರೀತಿಯಲ್ಲಿ ದಾವೀದನ ಕರ್ತನು ಎಂಬುದನ್ನು ಈಗ ನೋಡೋಣ. ಯಾವ ರೀತಿಯಲ್ಲಿ ಯೇಸು ದಾವೀದನ ಮಗನೂ, ದಾವೀದನ ಕರ್ತನೂ ಎರಡೂ ಆಗಲು ಸಾಧ್ಯ?

ಆತನು ಶರೀರಧಾರಿಯಾಗಿ ನಮ್ಮ ಮಧ್ಯೆ ವಾಸಮಾಡುವ ಮೊದಲು ಆತ್ಮಸ್ವರೂಪನುಳ್ಳವನಾಗಿದ್ದನು ಎಂಬುವ ಕಾರಣ ಮಾತ್ರದಿಂದ ಆತನು ದಾವೀದನ ಕರ್ತನಾಗಲು ಸಾಧ್ಯವಿಲ್ಲವೆಂದು ನಾವು ಉತ್ತರಿಸುತ್ತೇವೆ. – ಹಾಗಾದಲ್ಲಿ ಆತನು ತನ್ನ ಮಾನವ ಪೂರ್ವ ಅಸ್ತಿತ್ವದಲ್ಲಿ ದಾವೀದನ ಪೀಳಿಗೆಯವನು ಅಥವಾ ಮಗನೂ ಅಲ್ಲ. ನಮ್ಮ ಕರ್ತನಾದ ಯೇಸುವು ದಾವೀದನ ಕರ್ತನು ಇಲ್ಲವೇ ಆತನಿಗಿಂತ ಶ್ರೇಷ್ಟನು ಮತ್ತು ಆತನು ಮಧ್ಯಸ್ಥಗಾರನಾಗಿ ಸಾಧಿಸಿದ ಉತ್ತಮವಾದ ಪಾಪಪ್ರಾಯಶ್ಚಿತ್ತದ ಮಹಾಕಾರ್ಯದಿಂದಾಗಿ ಆತನು 'ಎಲ್ಲರ ಕರ್ತನು' (ಅ.ಕೃ 10:36) ಆಗಿದ್ದಾನೆ – **"ಯಾಕೆಂದರೆ ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರ ಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು"** – ರೋಮಾ. 14:9.

ನಿಜವಾಗಿ, ವಾಕ್ಯನು (ಲೋಗೋಸ್) ಯಾವ ರೀತಿಯಲ್ಲಿ ಒಬ್ಬ ದೇವರು ಅಥವಾ ಒಬ್ಬ ಪ್ರಭಾವಯುಕ್ತನೂ* ಎಂಬ ಶೈಲಿಯಲ್ಲಿದ್ದಾನೋ ಅದರಂತೆ ಆತನು ಯುಕ್ತವಾಗಿ ಅಧಿಕಾರದಲ್ಲಿ ಉನ್ನತನಾದ 'ಕರ್ತನು' ಎಂಬ ಶೈಲಿಯಲ್ಲಿದ್ದಿರ ಬಹುದು. ಅದರಂತೆ ಮನುಷ್ಯನಾದ ಕ್ರಿಸ್ತನು ಮರಣ ಹೊಂದುವ ಮುನ್ನ ಆತನ ಶಿಷ್ಯರು ಆತನು ಸಂಬೋಧಿಸುತ್ತಿದ್ದಂತೆ ಯುಕ್ತವಾಗಿ 'ಕರ್ತನು' ಎಂಬ ಶೈಲಿಯಲ್ಲಿದ್ದಿರಬಹುದು – **"ನೀವು ನನ್ನನ್ನು ಗುರುವೆಂದೂ, ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವುದು ಸರಿ, ನಾನು ಅಂಥವನೇ ಹೌದು"** (ಯೋಹಾನ 13:13) ಎಂಬುದಾಗಿ ಕ್ರಿಸ್ತನು ತಾನೇ ತನ್ನ ಶಿಷ್ಯರಿಗೆ ಹೇಳಿದ್ದಾನೆ. ಒಡಂಬಡಿಕೆಯ ವಿಶೇಷ ದೂತನಾಗಿ ತಂದೆಯು ಪವಿತ್ರಗೊಳಿಸಿ ಈ ಲೋಕದ ವಿಮೋಚನೆಗಾಗಿ ಕಳುಹಿಸಿರುವಾತನು, ತಂದೆಯು ಎಲ್ಲಾ ರೀತಿಯಲ್ಲಿ ಗೌರವಿಸಿ ಆತನ ಬಗ್ಗೆ **"ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ"** (ಮತ್ತಾಯ 17:5) ಎಂದು ಸಾಕ್ಷಿಹೇಳಿರುವಾಗ ಎಲ್ಲರೂ ಆತನ ಮಹಿಮೆಯನ್ನು ತಂದೆ ದೇವರ ಪೂರ್ಣಕೃಪೆಯೂ, ಸತ್ಯವೂ ಉಳ್ಳ ಏಕೈಕ ಪಡೆದಾತನ ಮಹಿಮೆಯನ್ನಾಗಿ ಎತ್ತಿಹಿಡಿಯುವುದು ಉತ್ಕೃಷ್ಟವಾಗಿದೆ. ಆತನನ್ನು ನಾವು ಗೌರವಿಸಬೇಕು, ಕೇಳಬೇಕು, ಆರಾಧಿಸಬೇಕು. ತಂದೆಯ ಪ್ರತಿನಿಧಿಯಾಗಿರುವ ಆತನಿಗೆ ಸನ್ಮಾನ ಸಲ್ಲಿಸಬೇಕು. ಆದರೆ ಮೇಲಿನ ವಾಕ್ಯಭಾಗದಲ್ಲಿ ಅಪೋಸ್ತಲನು ಸೂಚಿಸಿರುವಂತೆ ನಮ್ಮ ಕರ್ತನಾದ ಯೇಸುವು ತನ್ನ ಮರಣ ಹಾಗೂ ಪುನರುತ್ಥಾನಗಳೆಂಬ ಶ್ರೇಷ್ಠತೆಯ ಮೂಲಕ 'ಕರ್ತ' ಅಥವಾ ಒಡೆಯನಾಗಿರುವುದರಲ್ಲಿ ಒಂದು ವಿಶೇಷವಾದ ಅರ್ಥವಿದೆ.

---

* ನಾವೀಗ **'ಯೆಹೋವ'** ಎಂಬ ಪದದ ಬಗ್ಗೆ ಚರ್ಚಿಸುತ್ತಿಲ್ಲವೆಂದು ನೆನಪಿನಲ್ಲಿಟ್ಟುಕೊಳ್ಳ ಬೇಕು. ಈ ಪದವನ್ನು ಹಳೆ ಒಡಂಬಡಿಕೆಯ ಅನೇಕ ಕಡೆಗಳಲ್ಲಿ **'ಕರ್ತ'**ನೆಂದು ಭಾಷಾಂತರಿಸಲಾಗಿದೆ. ನಾವು **'ಕರ್ತನು'** ಎಂದು ತರ್ಜುಮೆಮಾಡಿರುವ ಮತ್ತು ಮೇಲೆ ಹೇಳಿರುವ ಇನ್ನಿತರ ಪದಗಳ ಬಗ್ಗೆ ಚರ್ಚಿಸುತ್ತಿದ್ದೇವೆ. **"ಕರ್ತನು (ಯೆಹೋವನು) ನಮ್ಮ ಕರ್ತನಿಗೆ** (ಆದೋನ್ – ನನ್ನ ಒಡೆಯನಿಗೆ) **"ನೀನು ನನ್ನ ಬಲಗಡೆಯಲ್ಲಿ ಕುಳಿತುಕೊಂಡಿರು' ಎಂದು ಹೇಳಿದನು"** ಇತ್ಯಾದಿ

ಪುನರುತ್ಥಾನ ಹೊಂದಿದ ಕ್ರಿಸ್ತನು 'ಎಲ್ಲರ' ಅಂದರೆ 'ಸತ್ತವರ ಮತ್ತು ಜೀವಿಸುವವರ' ಕರ್ತನಾಗಿದ್ದಾನೆ ಎಂಬ ಈ ವಿಶಿಷ್ಟವಾದ ಅರ್ಥವು ಮುಖ್ಯವಾಗಿ ಆತನ ಮಧ್ಯಸ್ಥಗಾರಿಕೆ ಹಾಗೂ ಪಾಪ ಪ್ರಾಯಶ್ಚಿತ್ತದ ಮಹಾಕಾರ್ಯದ ಮೇಲೆ ಹೆಚ್ಚಾಗಿ ಆತುಕೊಂಡಿದೆ. ಈ ಉದ್ದೇಶಕ್ಕಾಗಿಯೇ ಆತನು ಮನುಷ್ಯನಾಗಿ ಬಂದನು. ಮನುಕುಲವು ಅದರ ನೀತಿಭ್ರಷ್ಟ ಸ್ಥಿತಿಯಲ್ಲಿ ತಂದೆಯಾದ ಆದಾಮನ ಅವಿಧೇಯತೆಯ ಮೂಲಕ "ಪಾಪದ ಸ್ವಾಧೀನದಲ್ಲಿರುವುದಕ್ಕೆ ಮಾರಲ್ಪಟ್ಟವರಾಗಿ ಪಾಪ ಮತ್ತು ಮರಣ ಶಿಕ್ಷೆಗಳ ಆಳ್ವಿಕೆಯ ವಶದಲ್ಲಿದ್ದು ನಿಸ್ಸಹಾಯಕವಾಗಿತ್ತು. ದೇವರ ನಿಯಮದ ಸಾಮರಸ್ಯಕ್ಕೆ ತಕ್ಕಂತೆ, ಈ ಕೆಡಕುಗಳಿಂದ ಇದರ ಬಿಡುಗಡೆಗೆ ಆದಾಮನ ಮೂಲಕ ಆತನ ಸಂತಾನದವರಿಗೆ ಬಂದ ಶಿಕ್ಷೆಯನ್ನು ಸಂಪೂರ್ಣವಾಗಿ ಒದಗಿಸುವ ಅಗತ್ಯವಿತ್ತು. ಈ ಜನಾಂಗವನ್ನು ಪಾಪದಿಂದ ಹೊರತರಬೇಕಾಗಿತ್ತು. ಕ್ರಿಸ್ತನು ತನ್ನ ಅಮೂಲ್ಯ ರಕ್ತದಿಂದ ಇದನ್ನು ಕೊಂಡುಕೊಂಡನು, ಅದರ ಮಾಲಿಕನಾದನು. – "ಎಲ್ಲರ ಕರ್ತ"ನಾದನು. ಇದೇ ಉದ್ದೇಶಕ್ಕಾಗಿ ಆತನು ತನ್ನ ಮಾನವ ಪೂರ್ವ ಸ್ಥಿತಿಯ ಎಲ್ಲಾ ಮಹಿಮೆಗಳನ್ನು ಬಿಟ್ಟು ಮಾನವನಾದ ಕ್ರಿಸ್ತ ಯೇಸುವಾದನು. ದೇವರ ವಾಕ್ಯದ ಪ್ರಕಟನೆ ಏನೆಂದರೆ – 'ಆತನು ತನ್ನನ್ನು ಈಡುಬಲಿಯಾಗಿ ಅರ್ಪಿಸಿದನು' – "ಕ್ರಯಕ್ಕೆ ಕೊಂಡುಕೊಂಡನು". ಇದು ಆದಾಮನಲ್ಲಿ ದಂಡನೆಗೊಳಗಾದ ಜನಾಂಗವನ್ನು ಕೊಂಡುಕೊಳ್ಳುವ ಬೆಲೆಯಾಗಿದೆ. ಇಡೀ ಲೋಕವು ಯೇಸು ಕ್ರಿಸ್ತನ ಅಮೂಲ್ಯವಾದ ರಕ್ತ(ಪ್ರಾಣ)ದ ಮೂಲಕವಾಗಿ ಕೊಂಡುಕೊಳ್ಳಲ್ಪಟ್ಟಿತು.

ಆದರೆ, ಆತನು ಮಾನವ ಜನಾಂಗವನ್ನು ಬೆಲೆತೆತ್ತು ಕೊಂಡುಕೊಂಡನಾದರೂ, ಆತನು ನ್ಯಾಯದ ದೃಷ್ಟಿಯಲ್ಲಿ ಅದರ 'ಕರ್ತನು' 'ಪ್ರಭುವು' 'ಎಲ್ಲರ ಕರ್ತನು' ಆಗಿದ್ದರೂ ಆತನು ಆ ಜನಾಂಗವನ್ನು ತನ್ನ ದಾಸರನ್ನಾಗಿ ಮಾಡಿಕೊಳ್ಳಲು ಕೊಂಡುಕೊಳ್ಳಲಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಅವರನ್ನು ಪಾಪದಿಂದ, ಅದರ ಸಂಬಳವಾದ ಮರಣದಿಂದ ಬಿಡುಗಡೆಗೊಳಿಸುವಂತೆ, ಮುಂದೆ ಅವರು ಆತನ ಮೂಲಕವಾಗಿ ದೇವರ ಕೃಪಾವರಗಳನ್ನು ಹೊಂದಿಕೊಳ್ಳುವಂತೆ ಮಾಡಿದನು. ಮೆಸ್ಸಿಯ ರಾಜ್ಯದ ಸ್ಥಾಪನೆಯ ಉದ್ದೇಶವೆಂದರೆ, ಈ ಮೂಲಕವಾಗಿ ಮಾನವ ಕುಟುಂಬದ ಮೇಲೆ ಅವರು ಏದೇನ್ ತೋಟದಲ್ಲಿ ಕಳಕೊಂಡ ದೇವರ ಮಕ್ಕಳ ಅಧಿಕಾರ ಮತ್ತು ಸವಲತ್ತುಗಳನ್ನು ಹಿಂತಿರುಗಿಸುವುದು, ಅವರನ್ನು ವಿಮೋಚಿಸುವುದು ಮತ್ತು ಕಲ್ವಾರಿಯಲ್ಲಿ ಬೆಲೆಯೊಂದರ ಮೂಲಕ ಅವರನ್ನು ಕೊಂಡುಕೊಳ್ಳುವುದು. ಮಾನವರನ್ನು ಬಿಡುಗಡೆಗೊಳಿಸುವ ಈ ಅಧಿಕಾರವನ್ನು ಹೊಂದಿಕೊಳ್ಳುವುದಕ್ಕಾಗಿ ನಮ್ಮ ವಿಮೋಚಕನು ಕೊಂಡುಕೊಳ್ಳುವವನಾದನು, ಮಾಲಿಕನಾದನು ಮತ್ತು ಎಲ್ಲರ ಕರ್ತನಾದನು. ಈ ರೀತಿಯಲ್ಲಿ ಆತನ ಮರಣದ ಮೂಲಕ ಮೆಸ್ಸೀಯನು ದಾವೀದನ ಕರ್ತನೂ ಆದನು. ಯಾಕೆಂದರೆ ದಾವಿದನು ಸಹಾ ಆತನ ಅಮೂಲ್ಯ ರಕ್ತದ ಮೂಲಕ ಕೊಂಡುಕೊಂಡ ಜನಾಂಗದ ಸದಸ್ಯನಾಗಿದ್ದಾನೆ.

## "ದಾವೀದ ವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ, ಅವನ ಸಂತತಿಯೂ ಆಗಿದ್ದಾನೆ"

– ಪ್ರಕಟನೆ 22:16

**The Root and Offspring of David** - 22:26

ಹೆಚ್ಚಾಗಿ ಇದೇ ಆಲೋಚನೆಯನ್ನು ನಮ್ಮ ಕರ್ತನು ಸಭೆಗೆ ಹೇಳಿದ ಮೇಲಿನ ಮಾತುಗಳಲ್ಲಿ ಪ್ರಸ್ತುತಿಪಡಿಸಲಾಗಿದೆ. ಮಾನವ ದೇಹದ ಪ್ರಕಾರವಾಗಿ ನಮ್ಮ ಕರ್ತನು ಆತನ ತಾಯಿಯ ಮೂಲಕವಾಗಿ ದಾವೀದನ ಕೊಂಬೆಯೂ, ಚಿಗರೂ, ಸಂತತಿಯೂ, ಮಗನೂ ಆಗಿದ್ದಾನೆ. ಆತನು ತನ್ನ ನಿಷ್ಕಳಂಕ ದೇಹವನ್ನು ಸಮರ್ಪಿಸಿಕೊಂಡ ಶ್ರೇಷ್ಠತೆಯ ಸಲುವಾಗಿ ಆತನು ದಾವೀದನ ಬುಡವೂ, ಮಾತ್ರವಲ್ಲದೆ ಆತನ ಕರ್ತನೂ ಆಗಿದ್ದಾನೆ. 'ಮೂಲ' (ಬುಡ) ಎಂಬ ಪದದಿಂದಾದ ಆಲೋಚನೆಯು 'ಕರ್ತನು' ಎಂಬ ಪದದಲ್ಲಿ ಒದಗಿಸಿರುವುಕ್ಕಿಂತ ಪ್ರತ್ಯೇಕವಾಗಿದೆ. ದಾವೀದನ ವಂಶವೆಂಬ 'ಬುಡ'ಎಂಬುದು ದಾವೀದನ ಮೂಲವನ್ನು, ಜೀವದ ಮೂಲೋತ್ಪತ್ತಿ ಮತ್ತು ಬೆಳವಣಿಗೆಗಳನ್ನು ಸೂಚಿಸುತ್ತದೆ.

ದಾವೀದನು 'ಇಷಯನ ಬುಡದಿಂದ ಬಂದ ಚಿಗುರು' ಎಂದು ಸತ್ಯವೇದವು ಹೇಳುತ್ತದೆ. ಆದುದರಿಂದ ಸ್ವಾಭಾವಿಕ ವಂಶಾವಳಿಯ ಪ್ರಕಾರ ಆತನ ತಂದೆಯು ಆತನ ಮೂಲ(ಬುಡ)ವಾಗಿದ್ದಾನೆ. ಹಾಗಾದರೆ ಕ್ರಿಸ್ತನು ದಾವೀದನ 'ಬುಡ' ಅಥವಾ 'ತಂದೆ' ಹೇಗೆ ಮತ್ತು ಯಾವಾಗ ಆದನು? ಆತನು 'ದೇಹಧರಿಸಿಕೊಳ್ಳುವ' ಮೊದಲಲ್ಲ ಎಂದು ನಾವು ಉತ್ತರಿಸುತ್ತೇವೆ. ಆತನು ಮಾನವ ದೇಹಧರಿಸಿದಾಗಲೇ ಆತನು ಆದಾಮನ ಸಂತತಿಗೆ ಆಕೆಯ ತಾಯಿಯ ಮೂಲಕ ಸಂಬಂಧಿಸುವವನಾದನು (ಇಬ್ರಿಯ 2:14–18). ಆ ಸಂಬಂಧದಲ್ಲಿ ಆತನು ದಾವೀದನ ಚಿಗುರು ಅಥವಾ ಕೊಂಬೆಯಾದನೇ ಹೊರತು ಬುಡವಾಗಲಿಲ್ಲ. ಹಾಗಾದರೆ ಆತನು ಯಾವಾಗ ಮತ್ತು ಹೇಗೆ 'ಬುಡ'ವಾದನು? ಅದೇ ಸಮಯದಲ್ಲಿ, ಅದೇ ರೀತಿಯಲ್ಲಿ ಆತನು ದಾವೀದನ ಕರ್ತನಾದನು ಎಂದು ನಾವು ಉತ್ತರಿಸುತ್ತೇವೆ. ಆ ರೀತಿ ಯಾವುದೆಂದರೆ, ಅದು ಆತನ ಮರಣ. ಮರಣದ ಮೂಲಕ ಆತನು ಆದಾಮನ ಮತ್ತು ದಾವೀದನೂ ಸೇರಿದಂತೆ ಆತನ ಸಂತತಿಯವರೆಲ್ಲರ ಜೀವದ ಹಕ್ಕನ್ನು

ಕೊಂಡುಕೊಂಡನು; ಆ 'ಸಮಯ'ವೆಂದರೆ ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದುಬಂದಾಗ, ಆದಾಮನ ವಿಮೋಚಕನು ಆತನ ಸಂತತಿಯವರ ವಿಮೋಚಕನೂ ಆದನು. ಹೀಗಾಗಿ ಆತನು ದಾವೀದನ ವಿಮೋಚಕನೂ ಹೌದು.

ಆದುದರಿಂದ ಮಾನವ ಪೂರ್ವ ಸ್ಥಿತಿಯಲ್ಲಿದ್ದ ಲೋಗೋಸ್ ಆಗಲಿ, ಮಾನವನಾಗಿ ಇನ್ನೂ ಜನಿಸಿರದಿದ್ದ ಯೇಸುವಾಗಲೀ ದಾವೀದನ ಕರ್ತನು ಅಥವಾ ಬುಡವೂ ಅಲ್ಲ. ಆದರೆ ಪುನರುತ್ಥಾನಗೊಂಡ ಮೆಸ್ಸೀಯನು. ದಾವೀದನು ಆತ್ಮಪರಿವಶವಾದಾಗ (ಅಂದರೆ ಪ್ರವಾದೀಯ ಆತ್ಮದೊಂದಿಗೆ ಅಥವಾ ಪ್ರಭಾವದೊಂದಿಗೆ ಮಾತನಾಡುವಾಗ) ಯೇಸುವನ್ನು ಕರ್ತನೆಂದು ಕರೆಯುವವನಾಗಿ **'ನನ್ನ ಬಲಗಡೆಯಲ್ಲಿ ಕುಳಿತುಕೊಂಡಿರು ಎಂದು ಯೆಹೋವನು ನನ್ನ ಕರ್ತನಿಗೆ (ಯೇಸುವಿಗೆ) ಹೇಳಿದ್ದಾನೆ'** ಮುಂತಾಗಿ ಬರೆಯುತ್ತಾನೆ. ಈ ಉಲ್ಲೇಖವು ಬಲಿದಾನವಾದ ಮನುಷ್ಯನಾಗಿರುವ ಯೇಸುಕ್ರಿಸ್ತನಲ್ಲಿ ಆತನು ಇನ್ನೂ ತನ್ನ ಸಮರ್ಪಣೆಯನ್ನು ಮುಗಿಸದೇ ಇರುವ ಮಾನವನಾದ ಯೇಸುವಿಗಲ್ಲ, ಆದರೆ ಜಯಶೀಲನಾಗಿ ಈ ಕಾರ್ಯವನ್ನು ಮಾಡಿಮುಗಿಸಿದ ಯೇಸುವಿಗೆ, ಜೀವ ಮತ್ತು ಮಹಿಮೆಯುಳ್ಳ ಯೇಸು ಕರ್ತನಿಗೆ, **"ಸತ್ತವರೊಳಗಿಂದ ಮೊದಲು ಎದ್ದು ಬಂದವನೂ, ಭೂರಾಜರ ಒಡೆಯನೂ ಆಗಿರುವ ಯೇಸುಕ್ರಿಸ್ತನಿಗೆ"** (ಪ್ರಕಟನೆ 1:5). ಈತನ ಬಗ್ಗೆ ಪೇತ್ರನು ಸಹಾ ಹೇಳಿದ್ದೇನೆಂದರೆ **"ಎಲ್ಲಾ ಜನರಿಗೂ ಕರ್ತನಾಗಿರುವ ಯೇಸುಕ್ರಿಸ್ತನು"** (ಅ.ಕೃ. 10:36). **"ದೇವರು ಆತನನ್ನು ಮೂರನೆಯ ದಿವಸದಲ್ಲಿ ಎಬ್ಬಿಸಿ ಪ್ರತ್ಯಕ್ಷನಾಗುವಂತೆ ಮಾಡಿದನು"** (ಅ.ಕೃ. 10:41). ಪೌಲನು ಸಹಾ **"ಆ ಏಕಾಧಿಪತಿಯು ರಾಜಾಧಿ ರಾಜನೂ, ಕರ್ತನ ಕರ್ತನೂ ಆಗಿದ್ದಾನೆ"** (1 ತಿಮೋ. 6:15) ಎಂದು ಪ್ರಕಟಿಸಿದ್ದಾನೆ.

## ಎರಡನೆಯ ಆದಾಮನು
## The Second Adam

ಮಾನವ ಜಾತಿಯ ಬುಡ ಅಥವಾ ಮೂಲ ಪಿತೃವಾದ ಆದಾಮನು ದೇವರಿಗೆ ಅವಿಧೇಯನಾದ ಕಾರಣ ತನ್ನ ಕುಟುಂಬವನ್ನು ಆತನಂತೆ ದೇವರ ಸ್ವರೂಪದಲ್ಲಿ ಹುಟ್ಟಿಸಲು ವಿಫಲಗೊಂಡನು; ಆತನು ತನ್ನ ಸಂತಾನದವರಿಗೆ ನಿತ್ಯಜೀವವನ್ನು ಕೊಡಲು ವಿಫಲನಾದುದು ಮಾತ್ರವಲ್ಲ, ಆ ಬಗ್ಗೆ ತನ್ನ ಸ್ವಂತ ಹಕ್ಕನ್ನೂ ಕಳಕೊಂಡನು ಮತ್ತು ತನ್ನ ಸಂತಾನದವರ ಮೇಲೆ ಒಂದು ಮೃತ್ಯು ಪತ್ರವೋ ಎಂಬಂತೆ ವಂಶಪಾರ್ಯಂಪರ್ಯವಾದ ಪಾಪ, ಬಲಹೀನತೆ, ನೀತಿಭ್ರಷ್ಟತೆ ಮತ್ತು ಮರಣವನ್ನು ಬರಮಾಡಿದನು. ಎರಡನೆಯ ಆದಾಮನಾಗಿ ಮೊದಲನೆಯ ಆದಾಮನ ಸ್ಥಾನವನ್ನು ಅಲಂಕರಿಸುವಂತೆ ವಾಕ್ಯವೆಂಬಾತನು (ಲೋಗೋಸ್) ಮಾಂಸ ದೇಹಧಾರಿಯಾಗಿ ಮಾನವನಾದ ಯೇಸುಕ್ರಿಸ್ತನಾದನು. ಆತನು ಮೊದಲನೆಯ ಆದಾಮನ ತಪ್ಪು ಕಾರ್ಯಗಳನ್ನೆಲ್ಲಾ ಅಳಿಸಿಹಾಕಿ, ಆತನಿಗೂ, ಆತನ ಸಂತತಿಯವರೆಲ್ಲರಿಗೂ (ದೇವರ ನಿಯಮಗಳನ್ನು ಅಂಗೀಕರಿಸುವವರೆಲ್ಲರಿಗೂ) ಅವಿಧೇಯತೆಯ ದೆಸೆಯಿಂದ ಕಳೆದುಕೊಂಡಿದ್ದ ಸಮೃದ್ಧಿಯಾದ ಜೀವಿತ, ನಿತ್ಯಜೀವ ಇವುಗಳನ್ನು ಅವುಗಳ ಹಿತಕರ ಸ್ಥಿತಿಯಲ್ಲಿ ಹಿಂತಿರುಗಿಸುವವನಾದನು.

ಹೀಗಿದ್ದಾಗ್ಯೂ, ಮನುಷ್ಯನಾದ ಯೇಸು ಕ್ರಿಸ್ತನು 'ಎರಡನೆಯ ಆದಾಮ'ನೆಂದು ಕೆಲವರು ಊಹಿಸುವುದು ಬಲು ದೊಡ್ಡ ತಪ್ಪಾಗುತ್ತದೆ. ಓಹ್, ಇಲ್ಲ! ಅಪೋಸ್ತಲನು ಹೇಳುವಂತೆ **"ಎರಡನೆಯ ಆದಾಮನು ಪರಲೋಕದಿಂದ ಬಂದವನು"** (1 ಕೊರಿಂಥ 15:47). ಪರಲೋಕದಿಂದ ಬಂದ ಈ ಕರ್ತನು, ತನ್ನ ಎರಡನೆಯ ಆಗಮನದಲ್ಲಿ ಆದಾಮನ ಸಂತತಿಯವರ ತಂದೆಯ ಸ್ಥಾನ ಮತ್ತು ಕರ್ತವ್ಯಗಳನ್ನು ವಹಿಸಿಕೊಳ್ಳುತ್ತಾನೆ. ಆತನು ಅವರನ್ನು ಕಲ್ವಾರಿಯಲ್ಲಿ ತನ್ನ ಸ್ವಂತ ರಕ್ತವನ್ನು ಚೆಲ್ಲಿ ವಿಮೋಚಿಸಿದ್ದಾನೆ. ನಮ್ಮ ಕರ್ತನಾದ ಯೇಸುಕ್ರಿಸ್ತನು ತಾನು ಜೀವಧಾಯಕನಾಗುವ ಮೊದಲು ಅಥವಾ ತಂದೆಯಾಗುವ ಮೊದಲು ಆದಾಮನ ಸಂತತಿಯವರನ್ನು ನ್ಯಾಯತೀರ್ಪಿನ ದಂಡನೆಯಿಂದ ಕೊಂಡುಕೊಳ್ಳುವುದು ಅಗತ್ಯವಾಗಿತ್ತು. ಈ ಮಹಾ ಕಾರ್ಯವನ್ನೇ ಆತನು ತನ್ನ ಮೊದಲನೆಯ ಆಗಮನದಲ್ಲಿ ನೆರವೇರಿಸಿದನು. ಆತನು ತನ್ನ ಎರಡನೆಯ ಆಗಮನದಲ್ಲಿ ಪುನಃವಶದ ಪ್ರಕ್ರಿಯೆಯ ಮೂಲಕ ಮಾನವ ಜಾತಿಯನ್ನು ಉದ್ಧರಿಸುವವನಾಗಿದ್ದು ಅವರಿಗೆ ನಿತ್ಯಜೀವವನ್ನು, ಆದಾಮನಲ್ಲಿ ಕಳಕೊಂಡ ಎಲ್ಲಾ ಸವಲತ್ತುಗಳನ್ನು ಮತ್ತು ಆಶೀರ್ವಾದಗಳನ್ನು ಪುನಃ ದಯಪಾಲಿಸುವವನಾಗಿದ್ದಾನೆ. ಮಧ್ಯಂತರ ಕಾಲವು ತಂದೆಯ ಕಾರ್ಯಕ್ರಮಗಳಿಗನುಸಾರವಾಗಿ ವಿಮೋಚನೆಗೊಂಡ ಲೋಕದಿಂದ ಯಾರ ಅರ್ಹತೆಗಳು ಪೂರ್ವನಿರ್ಧಾರಿತವಾಗಿವೆಯೋ ಅಂಥವರನ್ನು ಆಯ್ಕೆಮಾಡುವ ಕಾರ್ಯ ಜರಗುತ್ತದೆ – ಅವರೆಲ್ಲರೂ ದೇವರ ಪ್ರೀತಿಯ ಮಗನ ಸ್ವಾರೂಪ್ಯವುಳ್ಳವರಾಗಿರುತ್ತಾರೆ – **"ತಾನು ಯಾರನ್ನು ತನ್ನವರೆಂದು ಮೊದಲು ತಿಳಿದುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವುದಕ್ಕೆ ಮೊದಲೇ ನೇಮಿಸಿದನು"** (ರೋಮಾ. 8:29). ಈ ವರ್ಗದವರನ್ನು 'ರಾಜವಂಶಸ್ಥ ಯಾಜಕ ವರ್ಗದ ಸಹಾಯಕ ಯಾಜಕರು', 'ಸಭೆ ಅಥವಾ ಕ್ರಿಸ್ತನ ದೇಹ', 'ಕ್ರಿಸ್ತನ ಮದಲಗಿತ್ತಿ' 'ಯಜ್ಞದ ಕುರಿಯಾದಾತನ ಹೆಂಡತಿ' ಮತ್ತು ಎಲ್ಲಾ ಗೌರವ, ಆಶೀರ್ವಾದಗಳ ಮತ್ತು ಆತನ ರಾಜ್ಯದ ಸೇವೆಯಲ್ಲಿ ಆತನ

'ಸಹ ವಾರಸುದಾರರು' ಎಂದು ನಾನಾ ವಿಧಗಳಲ್ಲಿ ಕರೆಯಲಾಗುತ್ತದೆ.

ಅದೇ ಪ್ರಕಾರವಾಗಿ, ಭವಿಷ್ಯದಲ್ಲಿನ ಕಾರ್ಯಗಳು, ಮಿಲಿಯಾಂತರ ಯುಗದ ಕಾರ್ಯಗಳು, ಮೆಸ್ಸೀಯನು ರಾಜ್ಯಭಾರಮಾಡಲಿರುವ ಭವ್ಯವಾದ ಉದ್ಧೇಶ ಇವುಗಳು **'ಪುನಃಶ್ಚೇತನ'** ಎಂಬ ಹೆಸರಿನಲ್ಲಿ ವ್ಯಕ್ತಗೊಳ್ಳುತ್ತದೆ. ಈ ಪದವು ಒಮ್ಮೆ ತಂದೆಯಾದ ಆದಾಮನಿಂದ ಉತ್ಪತ್ತಿಯಾಗಿತ್ತು. ಆದರೆ ಜೀವಪಡೆಯುವುದರಲ್ಲಿ ವಿಫಲವಾಯಿತು; ಅದು ಕೇವಲ ಪಾಪ ಮತ್ತು ಮರಣ ಶಿಕ್ಷೆಯ ಉತ್ಪತ್ತಿಗೆ ಕಾರಣ ವಾಯಿತು. ಆದರೆ ಜನಾಂಗದ ನೂತನ ತಂದೆಯು, ಎರಡನೆಯ ಆದಾಮನು ಸರ್ವೇಸಾಮಾನ್ಯವಾದ ಪುನಃಶ್ಚೇತನವನ್ನು ಪ್ರಸ್ತಾಪಿಸಿದನು. ಇದು ಈ ಲೋಕಕ್ಕೆ ಲಭ್ಯವಾಗುವಂತೆ ಈ ಪುನಃಶ್ಚೇತನದ ಸಮಯವು ಮಿಲಿಯಾಂತರ ಕಾಲ ಎಂದು ಶಿಷ್ಯರಿಗೆ ನುಡಿದನು **"ಯಾರು ನನ್ನನ್ನು ಹಿಂಬಾಲಿಸಿದ್ದಾರೋ ಅವರು ಪುನಃಶ್ಚೇತನದಲ್ಲಿ ಇಸ್ರಾಯೇಲ್ಯರ ಹನ್ನೆರಡು ಕುಲಗಳ ನ್ಯಾಯವಿಚಾರಣೆಗಾಗಿ ಹನ್ನೆರಡು ಸಿಂಹಾಸನದಲ್ಲಿ ಕುಳಿತುಕೊಳ್ಳುವರು"** (ಲೂಕ 22:30 ನೋಡಿರಿ) ಇವೇ ಮುಂತಾದ ನಮ್ಮ ಕರ್ತನ ಮಾತುಗಳಲ್ಲಿ ದೊರೆಯುತ್ತವೆ. ಸುವಾರ್ತಾ ಯುಗದಲ್ಲಿ ಆಯ್ಕೆಗೊಂಡ ಸಭೆಯು, ಪುನಃಶ್ಚೇತನವನ್ನು ಅನುಭವಿಸುತ್ತದೆ ಎಂಬ ಸತ್ಯವನ್ನು ಸತ್ಯವೇದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಮಾನ್ಯಮಾಡುತ್ತಾರೆ, ಆದರೆ ಅನೇಕರು ಮತ್ತೊಂದು ಪ್ರತ್ಯೇಕವಾದ ಪುನಃಶ್ಚೇತನವನ್ನು ಪ್ರಸ್ತಾಪಿಸಲಾಗಿದೆ ಮತ್ತು ಮಾನವ ಜಾತಿಯ ಪ್ರಪಂಚಕ್ಕೆ ಅದರ ಅವಕಾಶವಿದೆ ಎಂಬ ಸತ್ಯವನ್ನು ಒಟ್ಟಾರೆಯಾಗಿ ಉಪೇಕ್ಷೆ ಮಾಡುತ್ತಾರೆ; ಎಲ್ಲರೂ ಪೂರ್ಣ ಪುನಃಶ್ಚೇತನವನ್ನು ಅನುಭವಮಾಡುವುದಿಲ್ಲ, ಆದರೆ ಎಲ್ಲರಿಗೂ ಒಂದು ಅವಕಾಶವಿರುತ್ತದೆ. ಇದನ್ನು ಸೂಕ್ತರೀತಿಯಲ್ಲಿ ಉಪಯೋಗಿಸಿಕೊಂಡದ್ದೇ ಆದರೆ ಪೂರ್ಣವಾದ, ಸಮಗ್ರವಾದ ಪುನಃಶ್ಚೇತನಕ್ಕೆ ನಮ್ಮನ್ನು ನಡೆಸುವುದಾಗಿದೆ.

ಈ ಸಂಬಂಧದಲ್ಲಿ ಸಭೆಯ ಪುನಃಶ್ಚೇತನಕ್ಕೂ, ಲೋಕದ ಪುನಃಶ್ಚೇತನಕ್ಕೂ ಇರುವ ವಿಸ್ತಾರವಾದ ವ್ಯತ್ಯಾಸಗಳನ್ನು ಹೆಚ್ಚು ವಿಶಿಷ್ಟವಾಗಿ ಗಮನಿಸುವುದು ಒಳ್ಳೆಯದು. ಸಭೆಯ ಕುರಿತಾಗಿ ನೋಡುವಾಗ ಸುವಾರ್ತಯುಗದಲ್ಲಿ ನೀಡುವ ಪುನಃಶ್ಚೇತನಕ್ಕಾಗಿ ಅನೇಕರನ್ನು ಕರೆಯುಲಾಗುವುದು. ಆದರೆ, ಅವರಲ್ಲಿ ಕೆಲವರನ್ನೇ ಆರಿಸಿಕೊಳ್ಳಲಾಗುವುದು – ಆಹ್ವಾನಿಸಲ್ಪಟ್ಟವರಲ್ಲಿ ಕೆಲವರು ಮಾತ್ರವೇ ಪೂರ್ಣ ಪುನಃಶ್ಚೇತನವನ್ನು ಅನುಭವಿಸುವರು. ಅವುಗಳೆಂದರೆ, ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಗಳಾಗುವುದು, ದೈವ ಸ್ವಭಾವದಲ್ಲಿ ಪಾಲುಹೊಂದುವುದು. ಪ್ರಪಂಚಕ್ಕೆ ಒದಗಿಸಲಾದ ಪುನಃಶ್ಚೇತನವು, ನಾವೀಗಾಗಲೇ ಕಂಡುಕೊಂಡಂತೆ, ಅದೊಂದು ನೂತನ ಸ್ವಭಾವವಲ್ಲ, ಮಾನವ ಸ್ವಭಾವವನ್ನು ಸಮರ್ಪಕವಾದ ರೀತಿಯಲ್ಲಿ ಪುನಃಸ್ಥಾಪಿಸುವುದು ಅಥವಾ ಪುನ:ವಶಪಡಿಸಿ ಕೊಳ್ಳುವುದು.

ಹೀಗೆಂದು ಬರೆದದೆ – **"ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನೆಂದು ಬರೆದಿದೆಯಲ್ಲಾ. ಕಡೇ ಆದಾಮನೋ ಬದುಕಿಸುವ ಆತ್ಮನು. ಆತ್ಮೀಕವಾದುದು ಮೊದಲನೆಯದಲ್ಲ. ಪ್ರಾಕೃತವಾದುದು ಮೊದಲನೆಯದು; ಆಮೇಲೆ ಆತ್ಮೀಕವಾದದ್ದು"** – 1 ಕೊರಿಂಥ : 15:45–47. ನಿಜವಾಗಿಯೂ ನಮ್ಮ ಕರ್ತನಾದ ಯೇಸುವು ದೇಹಧಾರಿಯಾಗಿದ್ದ ದಿನಗಳಲ್ಲಿ ಮೊದಲನೆಯ ಆದಾಮನೊಡನೆ ಅಥವಾ ಆತನ ಜನಾಂಗದವರಲ್ಲಿ ಆತನ ಸಂತಾನದ ಮೂಲಕ ತನ್ನನ್ನು ಗುರುತಿಸಿಕೊಂಡನು – **"ಆತನು ದೇವದೂತರನ್ನು ಹಿಡಿದಿದ್ದಾನೆಂದು ಬರೆದಿಲ್ಲ; ಅಬ್ರಹಾಮನ ಸಂತತಿಯನ್ನು ಕೈಹಿಡಿದಿದ್ದಾನಷ್ಟೆ"** (ಇಬ್ರಿಯ 2:16). ಮತ್ತು "ಆತನು ಮರಣದ ಬಾಧೆಗಳನ್ನು ಅನುಭವಿಸುವುದಕ್ಕಾಗಿ ದೇವದೂತರಿಗಿಂತ ಕಡಿಮೆಯಾಗಿ ಮಾಡಲ್ಪಟ್ಟನು . . . ಆತನು ದೇವರ ಕೃಪೆಯಿಂದ ಎಲ್ಲಾ ಮನುಷ್ಯರಿಗಾಗಿ ಮರಣವನ್ನು ಅನುಭವಿಸಬೇಕಾಯಿತು". ಆದರೆ, ಈ ಉದ್ಧೇಶವನ್ನು ನೆರವೇರಿಸಿದ ಮೇಲೆ ಆತನು ಮರಣದಿಂದ ಜೀವಿಸುವವನಾಗಿ ಎದ್ದು ಬಂದನು, ದೇವರ ಸ್ವಭಾವದಲ್ಲಿ ಭಾಗಿಧಾರಿಯಾದನು, ಮಾನವ ಕುಟುಂಬವನ್ನು ಕೊಂಡುಕೊಳ್ಳುವವನಾದನು. ಆದರೆ ಹೆಚ್ಚುಕಾಲ ಲೋಕದವನಾಗಿಯೇ ಇರದೆ, ಪರಲೋಕದ ಕರ್ತನಾದನು – ಎರಡನೆಯ ಆದಾಮನೂ, ಜೀವದಾಯಕನೂ ಆದನು.

ಮೊದಲನೆಯ ಆದಾಮನು ಮೂಲದ 'ಬುಡ'ವಾಗಿದ್ದು ಅದರ ಮೂಲಕವಾಗಿ ಸಮಗ್ರವಾದ ಮಾನವ ಕುಟುಂಬವು ಉತ್ಪತ್ತಿಯಾಯಿತು. ಹೀಗಾಗಿ ನಮ್ಮ ಕರ್ತನು ಮಾಂಸದೇಹಧಾರಿಯಾಗಿ, ಮರಿಯಳ ಮಗನಾಗಿ, ದಾವೀದನ ಮಗನಾಗಿ, ಅಬ್ರಹಾಮನ ಮಗನಾಗಿ, ಅದೇ ಅರ್ಥದಲ್ಲಿ ಆದಾಮನ ಕೊಂಬೆಯೂ ಆದನು (ಆದರೆ ನಾವು ಕಂಡುಕೊಂಡಂತೆ, ಮೇಲಿನಿಂದ ಹಾನಿಯಿಲ್ಲದೆ ಜೀವವನ್ನು ಹೊಂದಿಕೊಂಡವನಾಗಿದ್ದನು. ಇದು ಆತನನ್ನು ಇನ್ನೂ ಸಹಾ ಪಾಪಿಗಳಿಂದ ಪ್ರತ್ಯೇಕವಾಗಿ ಇಡುವುದಾಗಿತ್ತು). ಆತನು ಮಾನವನಾಗಿ ದೇವರ ಯೋಜನೆಗೆ ವಿಧೇಯನಾಗಿ ತನ್ನನ್ನು ಸಮರ್ಪಿಸಿ ಕೊಂಡದ್ದರಿಂದ ದೇವ ಸ್ವಭಾವದಲ್ಲಿ ಉನ್ನತಕ್ಕೆ ಏರಿಸಲ್ಪಟ್ಟದ್ದು ಮಾತ್ರವಲ್ಲ, ಆದಾಮನ ಸಂತಾನದವ ರನ್ನೆಲ್ಲಾ, ಆದಾಮನ 'ಪಿತೃತ್ವ'ದ ಅಥವಾ ಜನಾಂಗದ ಮೂಲನೆಂಬ ಹಕ್ಕನ್ನೂ ಕೊಂಡುಕೊಂಡನು. ಈ

ರೀತಿಯಲ್ಲಿ ಆತನು ಆದಾಮನ ಸ್ಥಾನವನ್ನೂ, ಹಕ್ಕನ್ನೂ ಕೊಂಡುಕೊಂಡಾಗ, ನಮ್ಮ ಕರ್ತನು ಎರಡನೆಯ ಆದಾಮನಾದನು. ಆತನು ಆದಾಮನ ಜೀವಕ್ಕೆ ಬದಲಾಗಿ ತನ್ನ ಸ್ವಂತ ಮಾನವ ಜೀವವನ್ನು ಧಾರೆಯೆರೆದು ಆತನು ಸ್ವಾಭಾವಿಕ ರೀತಿಯಲ್ಲಿ ಉಂಟುಮಾಡ ಬಹುದಾಗಿದ್ದಂಥಹ ಸಂತತಿಯನ್ನು ತ್ಯಾಗಮಾಡಿದನು. ಆದಾಮನ ಮಕ್ಕಳಿಗಾಗಿ ತಕ್ಕ ಸಮಯದಲ್ಲಿ ಆತನು ಆದಾಮನ ಸಂತತಿಯವರಲ್ಲಿ ಯಾರಾರು ತನ್ನನ್ನು ಒಪ್ಪಿಕೊಳ್ಳುತ್ತಾರೋ ಅವರನ್ನು ತನ್ನ ಸ್ವಂತ ಮಕ್ಕಳನ್ನಾಗಿ ಅಂಗೀಕರಿಸಿದನು, ಅವರಲ್ಲಿ ಪುನಃಶ್ಚೇತನವನ್ನುಂಟುಮಾಡಿದನು ಮತ್ತು ಅವರಿಗೆ ಸಮಂಜಸವಾದ ಶರತ್ತುಗಳೊಡನೆ ನಿತ್ಯಜೀವವನ್ನು ದಯಪಾಲಿಸಿದನು. ಇನ್ನು ಮುಂದೆ ಇಷಯನ ಅಥವಾ ದಾವೀದನ ಬುಡದ ಕೊಂಬೆ ಯಾಗಿರದೆ ನಮ್ಮ ಕರ್ತನು ತಾನೇ ನೂತನ ಬುಡವಾದನು, ಮಾನವ ಜಾತಿಗೆ – ಆದಾಮ, ಅಬ್ರಹಾಮ, ದಾವೀದರುಗಳನ್ನೊಳಗೊಂಡಂತೆ ಪಾಪದಿಂದ ನಾಶವಾಗಿದ್ದ ಆ ಕೊಂಬೆಯ ಎಲ್ಲರಿಗೂ ನೂತನ ಜೀವ ಮತ್ತು ಪೋಷಣಶಕ್ತಿಯನ್ನು ನೀಡಲು ಸಿದ್ಧನಾದನು. ಅವರು ಅದನ್ನು ಪ್ರಮಾಣಸಿದ್ಧವಾದ ನೂತನ ಒಡಂಬಡಿಕೆಯ ಮೂಲಕ ಅಂಗೀಕರಿಸಿ ಕೊಳ್ಳುವರು.

ಇದು ಈ ಕಾಲದ ತನ್ನ ಸಭೆಗೆ ನಮ್ಮ ಕರ್ತನು ಮಾಡುವ ಪ್ರಥಮ ಕಾರ್ಯದಂತೆ ಮಿಲಿಯಾಂತರ ಯುಗದಲ್ಲಿ ಅದನ್ನು ಸ್ವೀಕರಿಸುವ ಮಾನವ ಜಾತಿಯುವರೆಲ್ಲರಿಗೆ ಆತನು ಮಾಡಲಿರುವ ಕಾರ್ಯವಾಗಿದೆ. ಈಗ ದೇವರೊಂದಿಗಿನ ಸಾಂಗತ್ಯದಲ್ಲಿ ಆತನ ಸಭೆಯು ಸಾಮರಸ್ಯದೊಡನೆ ಮಾನವ ನೀತಿನಿರ್ಣಯ ಹೊಂದಿಕೊಂಡಿರುವ ಆತನ ಪ್ರಥಮ ಕಾರ್ಯವಾಗಿದೆ – ಇದನ್ನೇ ಸರ್ವಸಂಪೂರ್ಣನಾದ ಯೇಸು ದೀಕ್ಷಾಸ್ನಾನದಲ್ಲಿ ತನ್ನನ್ನು ಪ್ರತಿಷ್ಠೆಪಡಿಸು ವುದಕ್ಕಿಂತಲೂ ಮೊದಲು ಅನುಭವಿಸಿದನು; ಇದನ್ನೇ ಸರ್ವ ಸಂಪೂರ್ಣನಾಗಿದ್ದ ಮಾನವನಾದ ಆದಾಮನು ಸಹಾ ಆತನು ಅವಿಧೇಯನಾಗುವ ಮೊದಲು ಅನುಭವಿಸಿದ್ದನು. ಇವರೆಲ್ಲರದ್ದು ಪ್ರತ್ಯಕ್ಷವಾದವುಗಳು, ಆದರೆ ನಮ್ಮದು ಹಾಗೆಂದು ಪರಿಗಣಿಸಿಕೊಳ್ಳುವದು ಮಾತ್ರವೇ ಆಗಿದೆ. ಹೀಗಾಗಿ ನಾವು ನಂಬಿಕೆಯ ಮೂಲಕ ನೀತಿವಂತರಾಗಿ ಎಣಿಸಲ್ಪಟ್ಟಿದ್ದೇವೆ ಎಂಬ ಹೇಳಿಕೆ ಇದೆ.

ನಮ್ಮ ಕರ್ತನು ತನ್ನನ್ನು ಮತ್ತು ತನ್ನ ಸಭೆಯನ್ನು ದ್ರಾಕ್ಷೆಬಳ್ಳಿಯನ್ನಾಗಿ ಪ್ರತಿನಿಧಿಸುತ್ತಾನೆ; ಇದು ನಮಗೆ ಬೇರು ಮತ್ತು ಕೊಂಬೆಗಳ ಪ್ರಸ್ತಾಪದ ಬಗ್ಗೆ ಉತ್ತಮ ನಿರೂಪಣೆಯನ್ನು ನೀಡುವುದಾಗಿದೆ. ಆದಾಮ ಮತ್ತು ಆತನ ಸಂತಾನವು ಮೂಲದ ಬೇರು ಮತ್ತು ಕೊಂಬೆಗಳಾಗಿದ್ದು ಪಾಪವೆಂಬ ನಂಜಿಗೆ ತುತ್ತಾಗಿದ್ದು ಕೆಟ್ಟ ಪ್ರತಿಫಲವಾದ ಮರಣವನ್ನು ಉತ್ಪಾದಿಸಿತು. ನಮ್ಮ ಕರ್ತನಾದ ಯೇಸು ನೂತನ ಕೊಂಬೆಯಾಗಿ ಆದಾಮನ ದ್ರಾಕ್ಷೆಬಳ್ಳಿಯೊಂದಿಗೆ ಕಸಿಮಾಡಲ್ಪಟ್ಟು ಒಂದು ವಿನೂತನ ಫಲವನ್ನು ಬಿಟ್ಟನು. ದ್ರಾಕ್ಷೆಬಳ್ಳಿಯ ವಿಚಿತ್ರವೆಂದರೆ ಅದರ ಬಳ್ಳಿಗಳು ನೆಲದಲ್ಲಿ ಹೂತು ಹಾಕಿದರೆ ಅವು ಬೇರುಗಳಾಗಿ ಬಿಡುತ್ತವೆ. ಅದರಂತೆ ನಮ್ಮ ಕರ್ತನು ಆದಾಮನ ಕಸಿಮಾಡಲ್ಪಟ್ಟವನಾಗಿ, ಹೂಳಲ್ಪಟ್ಟು, ಕೊಂಬೆಯಾಗಿ ಸ್ಥಗಿತಗೊಂಡು ಬೇರಾಗುತ್ತಾನೆ. ಈ ಕಾಲದಲ್ಲಿರುವ ಆತನ ಸಭೆಗಳು ಆತನ ಕೊಂಬೆಗಳಾಗಿವೆ. ಅದರಂತೆ ಅವುಗಳು ಪವಿತ್ರತೆಗೆ ತಮ್ಮ ಫಲಗಳನ್ನು ಬಿಡುವವುಗಳಾಗಿವೆ – **"ನೀವು ಪಾಪದಿಂದ ಬಿಡುಗಡೆ ಹೊಂದಿ ದೇವರಿಗೆ ದಾಸರಾದುದರಿಂದ ಪರಿಶುದ್ಧರಾಗುವುದೇ ನಿಮ್ಮ ಫಲ"** (ರೋಮಾ. 6:22). ನೂತನ ಜೀವವನ್ನು ಆತನಿಂದ ಸೆಳಕೊಳ್ಳಲಾಗುವುದು. ಆದರೆ ಈ ಯುಗದ ಎಲ್ಲಾ ಕೊಂಬೆಗಳೂ ಆತನ ಕೊಂಬೆಗಳಾಗಿ ಆತನಂತೆ ಹೆಚ್ಚಿನ ಫಲಗಳನ್ನು ನೀಡುವುದು ಮಾತ್ರವಲ್ಲ, ಆತನಂತೆಯೇ ಸಂಭವನೀಯವಾಗಿ ಹೂಳಲ್ಪಡಬೇಕು ಮತ್ತು ಆತನೊಡನೆ ಬೇರಿನ ಭಾಗಗಳಾಗಬೇಕು. ಮಿಲಿಯಾಂತರ ಯುಗದಲ್ಲಿ ಚೇತನಗೊಳ್ಳಬೇಕು ಮತ್ತು ಮಾನವ ಕುಲದ ಪುನಃಶ್ಚೇತನವನ್ನು ಸಂರಕ್ಷಿಸಬೇಕು.

ಪತನಗೊಂಡ ಆದಾಮನು ಮಾನವ ಕುಟುಂಬವನ್ನು ಪಾಪ ಮತ್ತು ಮರಣದ ಬಂಧನದಲ್ಲಿ ಉತ್ಪತ್ತಿ ಮಾಡಿದನು; ಎರಡನೆಯ ಆದಾಮನಾದ ಕ್ರಿಸ್ತನು ಮೊದಲನೆಯವನ ಮತ್ತು ಆತನ ಜನಾಂಗದವರ ಅಧಿಕಾರವನ್ನು ತರುವವನಾಗಿ, ಎಲ್ಲಾ ಇಚ್ಛೆಯುಳ್ಳವರು ಮತ್ತು ವಿಧೇಯರನ್ನು ಪುನಃಶ್ಚೇತನ ಹೊಂದಲು ತಯಾರು ಮಾಡುವವನಾಗಿದ್ದಾನೆ. ಇದನ್ನು "ಪುನಃಶ್ಚೇತನ"ವೆಂದು ಕರೆಯಲಾಗುವುದು – (ಅ.ಕೃ. 3:19–23 ನೋಡಿರಿ). ಮೊದಲನೆಯ ಆದಾಮನಲ್ಲಿ ಕಳಕೊಂಡ ಈ ಲೋಕದ ಸವಲತ್ತುಗಳನ್ನೂ, ಆಶೀರ್ವಾದಗಳನ್ನೂ ಹಿಂತಿರುಗಿಸುವುದು. ಅಂದರೆ ಕರ್ತನ ಬಳ್ಳಿಗಳಾಗಿ, ಮನುಕುಲವು ಪುನರ್ವಶಗೊಂಡು ದೇವರನ್ನು ಸ್ತುತಿಸಲು ಫಲಪ್ರದವಾಗಿರುವರು. ಆದರೆ, ಗಮನಿಸತಕ್ಕದ್ದೇನೆಂದರೆ, ಬುಡವಾಗುವ ಸವಲತ್ತು ಕ್ರಿಸ್ತನಿಗೆ, ಶಿರಸ್ಸು ಮತ್ತು ದೇಹ ಅಂದರೆ ಸುವಾರ್ತಾ ಯುಗದಲ್ಲಿ **"ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವುದಕ್ಕೂ ಯೇಸುಕ್ರಿಸ್ತನ ರಕ್ತದಿಂದ ಪೋಷಿತರಾಗುವುದಕ್ಕೂ ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಿಕೊಳ್ಳಲ್ಪಟ್ಟವರಿಗೆ ಮೀಸಲಾಗಿದೆ"** (1 ಪೇತ್ರ 1:2). ಹಿಂದಿನ ಕಾಲದ (ಕೊಂಬೆಯು ಹೂಳಲ್ಪಟ್ಟು ಬುಡವಾಗುವ ಮೊದಲೇ ಜೀವಿಸಿದ್ದ) ದಾವೀದ ಮತ್ತು ಇತರ ಗಣ್ಯ ಅರ್ಹರುಗಳು ಎಂದಿಗೂ ಈ ಬುಡದ ಭಾಗವಾಗಲೀ,

ಮಿಲಿಯಾಂತರ ಯುಗದ ನಂಬಿಗಸ್ತರಾಗಲೀ ಆಗಲಾರರು. ಆದರೆ ಅವರು ಆತನ ಅಂದರೆ ಸರ್ವಸಂಪೂರ್ಣ ವ್ಯಕ್ತಿಯಾದ ಯೇಸುಕ್ರಿಸ್ತನ ಹೋಲಿಕೆಯನ್ನು ಅದು ಈ ಲೋಕದ್ದಾಗಲೀ ಪರಲೋಕದ್ದಾಗಲೀ ಹೊಂದಿಕೊಳ್ಳುವಾಗ ಅವರಿಗೆ ತೃಪ್ತಿಯಾಗುವುದು. ಮಾನವ ಜಾತಿಗೆ ಸರ್ವ ಸಂಪೂರ್ಣ ವ್ಯಕ್ತಿಯಾದ ಯೇಸುಕ್ರಿಸ್ತನ, 'ಪವಿತ್ರ ಕೊಂಬೆಯಾಗುವ' ಹೋಲಿಕೆಯನ್ನು ಹೊಂದಿಕೊಳ್ಳುವ ಸದವಕಾಶ ಒದಗಿಬರುವುದು. ಅದೇ ಸಮಯದಲ್ಲಿ ಆತನ ದೇಹವೂ. ಮದಲಗಿತ್ತಿಯೂ, ಆತನ ನಂಬಿಗಸ್ತ ಸಹಾಯಕ ಯಾಜಕರಾದವರೂ ಆದ ಸಭೆಯು ಈಗ ಕ್ರಿಸ್ತನ ಶ್ರಮೆಯ ಹಿಂದೆ ಇರುವುದನ್ನು ಭರ್ತಿಮಾಡುವವರಾಗಿದ್ದು "ಆತನೊಂದಿಗೆ ಆತನ ಮರಣದ ಸಾರೂಪ್ಯದಲ್ಲಿ ಬಿತ್ತಲ್ಪಟ್ಟವರು" ಆತನ ಪರಲೋಕದ ಸಾರೂಪ್ಯವನ್ನು ಪಡಕೊಳ್ಳುವರು – 1 ಕೊರಿಂಥ 15:48,49 ಮತ್ತು ಇಬ್ರಿಯ 11:39,40.

## ನಿತ್ಯನಾದ ತಂದೆ
## The Everlasting Father

**"ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಆತನ ಹೆಸರು"**
(ಯೆಶಾಯ 9:6)

ನಾವೀಗಾಗಲೇ ನಮ್ಮ ಕರ್ತನಾದ ಯೇಸುಕ್ರಿಸ್ತನಿಗೆ ಅನ್ವಯವಾಗುವ **"ಪರಾಕ್ರಮಿಯಾದ ದೇವರು"** ಎಂಬುದರ ಔಚಿತ್ಯತೆಯನ್ನು ಗಮನಿಸಿದ್ದೇವೆ. ಆತನು ನಿಜವಾಗಿಯೂ ಪರಲೋಕದ ತಂದೆಯು ಕುಟುಂಬದವರಲ್ಲಿ ಅದ್ಭುತವಾದವನು ಎಂಬುದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವೂ ಇರದು. ಆತನೊಬ್ಬ ಮಹಾ ಸಮಾಲೋಚಕನು ಅಥವಾ ಬೋಧಕನು ಎಂಬುದರ ಬಗ್ಗೆಯೂ ಯಾರದ್ದೂ ವಿವಾದವಿರದು. ಇಂದಿನ ಕೆಡುಕಿನ ಸಂಸ್ಥೆಗಳ ಅಳಿವಿನಿಂದಾಗುವ ಇಕ್ಕಟ್ಟಿನ ಕಾಲ ಮತ್ತು ಗಲಿಬಿಲಿಯ ಕಾಲದಲ್ಲಿ ಕ್ರಿಸ್ತನ ರಾಜ್ಯವು ಸ್ಥಾಪನೆಯಾಗುವುದಾದರೂ, ನಮ್ಮ ಕರ್ತನು ಶಾಂತಿಯ ಅರಸನು. ನಮ್ಮ ಕರ್ತನು ಖಚಿತವಾದ. ನೀತಿವಂತಿಕೆ ಎಂಬ ಯುಕ್ತವಾದ ನೆಲೆಯ ಮೇಲೆ ಸದಾ ಶಾಂತಿ ಉಳಿಯುವಂತೆ ಅವನ ರಾಜ್ಯವನ್ನು ಸ್ಥಾಪಿಸಲಿರುವನು. ಇದು ದೈವಿಕ ಗುಣಗಳಿಗೆ ಮತ್ತು ಯೋಜನೆಗಳಿಗೆ ತಕ್ಕಂತೆ ಇರುವುದು. ನಾವೀಗ **'ನಿತ್ಯನಾದ ತಂದೆ'** ಎಂಬ ಈ ಶಿರೋನಾಮೆಯನ್ನು ಪರೀಕ್ಷೆ ಮಾಡುವವರಾಗಿದ್ದು ಇದು ಇತರ ಶಿರೋನಾಮೆಗಳಂತೆಯೇ ಸೂಕ್ತವಾದುದು ಅರ್ಥಗರ್ಭಿತವಾದುದು ಎಂದು ಕಂಡುಕೊಳ್ಳಲಿದ್ದೇವೆ.

ಕೆಲವರು ತರ್ಕಮಾಡುವಂತೆ, ಇದು ನಮ್ಮ ಕರ್ತನಾದ ಯೇಸುವಿನ ದೇವರೂ, ತಂದೆಯೂ ಆಗಿರುವ (1 ಪೇತ್ರ 1:3) "ಯೆಹೋವನೇ ನಿತ್ಯನಾದ ತಂದೆ" ಎಂದು ಹೇಳುವ ಬಹುಸಂಖ್ಯೆಯ ವೇದವಚನಗಳಿಗೆ ವಿಭಿನ್ನವಾದುದಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಈ ಶಿರೋನಾಮೆಯು ನಮ್ಮ ಕರ್ತನ ಎರಡನೆಯ ಬರೋಣದಲ್ಲಿ ಆತನಿಗೂ ಅನ್ವಯವಾಗುವಂತೆ ವೇದವಚನಗಳು ಸ್ಪಷ್ಟವಾಗಿ ಒಂದು ವಿಶಿಷ್ಟವಾದ ಅರ್ಥವನ್ನು ಸೂಚಿಸುತ್ತವೆ. – ಆತನು ಮಿಲಿಯಾಂತರ ಯುಗದಲ್ಲಿ ಪುನಶ್ಚೇತನರಾದ ಮಾನವ ಕುಲದ ತಂದೆಯಾಗುವನು. ನಿಜವಾಗಿಯೂ, ನಾವೀಗ ತಾನೇ ಪರಿಗಣಿಸಿದ ಶಿರೋನಾಮೆಗೆ – "ದಾವೀದನ ಮತ್ತು ಮಾನವ ಕುಲದ ಕರ್ತನು", ಹೊಸ ಬುಡ (ಬೇರು) ಇವುಗಳಿಗೆ ಇದು ಸರಿಸಮವಾಗಿದೆ. ಎರಡನೆಯ ಆದಾಮ ಎಂಬುದು ನಿತ್ಯ ಜೀವವನ್ನು ನೀಡುವ ನಿತ್ಯನಾದ ತಂದೆಯನ್ನು ಸೂಚಿಸುತ್ತದೆ.

ನಮ್ಮ ಕರ್ತನು ಇಡೀ ಲೋಕವನ್ನು ತನ್ನ ಪ್ರಾಣವನ್ನು ತೆತ್ತು ಕೊಂಡುಕೊಂಡಿರುವುದರಿಂದ, ಆ ಕೊಂಡುಕೊಳ್ಳುವಿಕೆ ಎಂಬ ಶ್ರೇಷ್ಠತೆಯ ಫಲವಾಗಿ ಆತನು ಅದರ ಕರ್ತನೂ ಒಡೆಯನೂ, ಅದನ್ನು ಪುನಃಪ್ರತಿಷ್ಠಿಸುವವನೂ, ಅದರ ಜೀವದಾಯಕನೂ ಆಗಿದ್ದಾನೆ. 'ತಂದೆ' ಎಂಬುದರ ಕೇಂದ್ರ ಆಲೋಚನೆಯು 'ಜೀವದಾಯಕ'ವೇ ಆಗಿದೆ. ಪುನಃಶ್ಚೇತನಗೊಳ್ಳಲಿರುವ ಅಥವಾ ಸತ್ತವರೊಳಗಿಂದ ಪುನಃಸ್ಥಾಪಿತಗೊಂಡು, ಪುನರುತ್ಥಾನದ ಪ್ರಕ್ರಿಯೆಯಲ್ಲಿ ಹೊಸದಾಗಿ ಹುಟ್ಟಲಿರುವ ಈ ಲೋಕದೊಂದಿಗೆ ತನ್ನ ಸಂಬಂಧವನ್ನು ಪ್ರತಿನಿಧಿಸಲು **'ನಿತ್ಯನಾದ ತಂದೆ'** ಎಂಬುದಕ್ಕಿಂತ ಇನ್ನೂ ಸೂಕ್ತವಾದ, ಉಚಿತವಾದ ಶಿರೋನಾಮೆಯನ್ನು ನಮ್ಮ ಕರ್ತನು ತೆಗೆದುಕೊಳ್ಳಲಾರನು. ಈ ಲೋಕದ ಜೀವವು ಯೇಸುಕ್ರಿಸ್ತನಿಂದಲೇ ನೇರವಾಗಿ ಬರುವುದು, ನಾವೀಗಾಗಲೇ ಸಂಕ್ಷಿಪ್ತವಾಗಿ ನೋಡಿದಂತೆ, ಆತನು ದೇವರ ವ್ಯವಸ್ಥೆಯ ಮೂಲಕ ನ್ಯಾಯಕ್ಕೆ ಪೂರ್ಣ ಬೆಲೆ ತೆತ್ತು ಇದನ್ನು ಕೊಂಡುಕೊಂಡಿದ್ದಾನೆ. ಆದಾಗ್ಯೂ, ಪುನಃಸ್ಥಾಪಿಸಲ್ಪಟ್ಟ ಈ ಲೋಕವು, ಪುನಃಸಂಧಾನದ ಪ್ರಕ್ರಿಯೆಯು ಮುಗಿದ ಮೇಲೆ ಯೆಹೋವನನ್ನು ತಮ್ಮ ಜೀವದ ಮತ್ತು ಆಶೀರ್ವಾದದ ಮಹಾ ಬುಗ್ಗೆಯನ್ನಾಗಿ,

ನಮ್ಮ ಕರ್ತನು ಕಾರ್ಯಸಾಧಿಸಿದ ರಕ್ಷಣಾ ಯೋಜನೆಯ ಕರ್ತೃವಾಗಿ, ಮಹಾ ತಂದೆಯಾಗಿ. ಸಮಸ್ತರ ಮಹಾ ಕರ್ತನನ್ನಾಗಿ ಮಾನ್ಯಮಾಡುತ್ತಾರೆ – 1 ಕೊರಿಂಥ 15:24–28; 3:23 ಮತ್ತು ಮತ್ತಾಯ 19:28.

ನಾವೀಗ ತಾನೇ ಕಂಡುಕೊಂಡದ್ದಕ್ಕೆ ಪೂರ್ಣ ಅನುಗುಣವಾಗಿ ಕೆಳಗಿನ ಪ್ರವಾದನೀಯ ಹೇಳಿಕೆಯು ಶತಮಾನಗಳಿಂದ ಬುದ್ಧಿಜೀವಿಗಳನ್ನು, ಬುದ್ಧಿಯಿಲ್ಲದವರನ್ನು, ವೇದ ಪಂಡಿತರುಗಳನ್ನು, ವ್ಯಾಖ್ಯಾನಕಾರರುಗಳನ್ನು ಮತ್ತು ವಿದ್ಯಾರ್ಥಿಗಳನ್ನು ಬೆರಗುಗೊಳಿಸಿದೆ:

**“ಅರಸನೇ, ವಂಶಪಾರ್ಯಂಪರ್ಯವಾಗಿ ಬಂದ ಸ್ಥಾನದಲ್ಲಿರುವುದಕ್ಕೆ ನಿನಗೆ ಮಕ್ಕಳು ಹುಟ್ಟುವರು; ಅವರನ್ನು ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ ನೇಮಿಸುವಿ”** – ಕೀರ್ತನೆ 45:16

**Instead of thy Fathers, they shall be thy children whom thou mayest make Princes in all the Earth -** Psa. 45:16

ಪಿತೃಗಳನ್ನು ಮತ್ತು ಪ್ರವಾದಿಗಳನ್ನು ಮುಖ್ಯವಾಗಿ ಯೇಸುವಿನ ತಾಯಿಯಾದ ಮರಿಯಳ ಮೂಲಕವಾಗಿ ನಮ್ಮ ಕರ್ತನ ವಂಶಾವಳಿಯಲ್ಲಿರುವವರನ್ನು ದೀರ್ಘಕಾಲದವರೆಗೆ ‘ಪಿತೃಗಳು’ ಮೆಸ್ಸೀಯನ ‘ಪೂರ್ವಜರು’ ಎಂದು ಗೌರವಿಸಲಾಗುತ್ತಿತ್ತು. ಮೇಲೆ ಕೊಟ್ಟ ವಾಕ್ಯಭಾಗದಲ್ಲಿಯೂ ದಾವೀದನು ಬುಡವಾಗಿದ್ದು ಅದರ ಮೂಲಕವಾಗಿ ಮೆಸ್ಸೀಯನೆಂಬ ನೀತಿವಂತನ ಕೊಂಬೆ ಪುಟಿಯಿತೆಂದು ನೋಡುತ್ತೇವೆ. ಹೀಗಾಗಿ ಮೆಸ್ಸೀಯನು ದಾವೀದನ ಮಗನಾಗಿದ್ದಾನೆ. ಆದರೆ, ಕ್ರಿಸ್ತನ ದೇಹವಾದ ಸಭೆಯು ಪೂರ್ಣಗೊಂಡು, ಅದು ತನ್ನ ಮಹಿಮೆಯ ಶಿರಸ್ಸಾದ ಯೇಸುಕ್ರಿಸ್ತನನ್ನು ಕೂಡಿಕೊಳ್ಳುವಾಗ, ಮಾನವ ಕುಲದ ನಿತ್ಯನಾದ ತಂದೆಯು ಪ್ರಪಂಚದ ನೂತನ ಹುಟ್ಟನ್ನು ಆರಂಭಿಸುವಾಗ ಇದೆಲ್ಲವೂ ಬದಲಾಗುತ್ತದೆ. ಈ ಹಿಂದೆ ತಂದೆಗಳಾಗಿದ್ದವರು ಅಬ್ರಹಾಮ, ಯಾಕೋಬ, ಇಸಾಕ, ದಾವೀದ ಮುಂತಾದವರು ಈಗ ಮಕ್ಕಳಾಗುತ್ತಾರೆ. ಆ ಮಾತಿನ ಯುಕ್ತವಾದ ಅರ್ಥದಲ್ಲಿ ಇವರಲ್ಲಿ ಒಬ್ಬರಿಗೂ ಜೀವವಿಲ್ಲ; ಅವರೆಲ್ಲರೂ ಮರಣ ಶಿಕ್ಷೆಗೆ ಒಳಗಾದ ಸಂತತಿಗೆ ಸೇರಿದವರು. ಯೇಸು ನಮ್ಮ ಮಾನವ ಸ್ವಭಾವವನ್ನು ತನ್ನ ವಶಕ್ಕೆ ತೆಗೆದುಕೊಂಡು ತನ್ನನ್ನು ಅಬ್ರಹಾಮ ಮತ್ತು ದಾವೀದನ ಸಂತಾನದವನು ಎಂದು ಗುರುತಿಸಿಕೊಂಡಾಗ, ಹಾಗೂ ವಿಮೋಚನಾ ಕಾರ್ಯವನ್ನು ನೆರವೇರಿಸಿದಾಗ, ಅದು ಸರ್ವಸಾಮಾನ್ಯವಾಗಿ ಈ ಲೋಕಕ್ಕೆ ಅನ್ವಯವಾದುದು ಮಾತ್ರವಲ್ಲ, ದೈಹಿಕ ರೀತಿಯ ಆತನ ಈ ಪೂರ್ವಜರಿಗೂ ಅನ್ವಯವಾಯಿತು. ಆತನು ಎಲ್ಲರನ್ನೂ ಕೊಂಡುಕೊಂಡನು. ಆತನ ಹೊರತಾಗಿ ಯಾರೂ ಸಂಪೂರ್ಣವಾದ, ಸಮರ್ಪಕವಾದ ಮತ್ತು ನಿತ್ಯನಿರಂತರವಾದ ಜೀವವನ್ನು ಪಡಕೊಳ್ಳಲು ಸಾಧ್ಯವಿಲ್ಲ – **“ಆತನ ಮಗನನ್ನು ನಂಬುವವನಿಗೆ ಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ”** (ಯೋಹಾನ 3:36). ಹೀಗಾಗಿ ಅಬ್ರಹಾಮ, ಯಾಕೋಬ, ಇಸಾಕ ಮತ್ತು ದಾವೀದ ಹಾಗೂ ಎಲ್ಲಾ ಪ್ರವಾದಿಗಳೂ, ಮತ್ತು ಲೋಕದ ಉಳಿದವರೆಲ್ಲರೂ ಕ್ರಿಸ್ತನ ಮೂಲಕವೇ ತಮ್ಮ ಭವಿಷ್ಯತ್ತನ್ನು, ನಿತ್ಯ ಜೀವಿತವನ್ನು ಪಡಕೊಳ್ಳಬಹುದಾಗಿದೆ. ಇಲ್ಲವಾದಲ್ಲಿ ಇಲ್ಲವೇ ಇಲ್ಲ. ಆತನ ಹೊರತಾಗಿ ಉಳಿದೆಲ್ಲೆಡೆ ದಂಡನೆ ಮಾತ್ರವೇ. ಆದುದರಿಂದ, ದೇವರ ಸೂಕ್ತ ಸಮಯದಲ್ಲಿ ಅವರುಗಳು ಸತ್ತವರೊಳಗಿಂದ ಎಬ್ಬಿಸಲ್ಪಡುವರು ಎಂಬುದು ಸತ್ಯ. ಇದು ಮಹಾ ಜೀವದಾಯಕನಾದ ಯೇಸುವಿನಿಂದ ಮಾತ್ರ ಸಾಧ್ಯ. ಹೀಗಾಗಿ ಆತನೇ ಅವರ ತಂದೆಯೂ ಜೀವದಾಯಕನೂ ಆಗಿದ್ದಾನೆ.

ಈ ಸಂಬಂಧದಲ್ಲಿ ವೇದವಚನಗಳು ಕ್ರಿಸ್ತನ ಮದಲಗಿತ್ತಿಯಾದ ಸಭೆಯ ಹೊಸಹುಟ್ಟುವಿಕೆಯಲ್ಲಿ ಪರಲೋಕದ ತಂದೆಯನ್ನು ಜನಕ ಎಂಬುದಾಗಿ ಸ್ಪಷ್ಟವಾಗಿ ಹೇಳುತ್ತದೆ ಎಂಬುದನ್ನು ಗಮನಿಸುವುದು ಒಳ್ಳೆಯದು. ಈ ಪ್ರಸ್ತಾಪವನ್ನು ರುಜುವಾತು ಪಡಿಸುವಂತೆ ಅಪೋಸ್ತಲನಾದ ಪೇತ್ರನು – **“ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರೂ ಆಗಿರುವಾತನು . . . . ನಮ್ಮನ್ನು ಪಡೆದಿದ್ದಾನೆ”** (1 ಪೇತ್ರ 1;3). ಅದೇ ರೀತಿಯಲ್ಲಿ ಅಪೋಸ್ತಲನಾದ ಯೋಹಾನನು ಸಹಾ **“ನಾವು ದೇವರಿಂದ ಹುಟ್ಟಿದವರು”** (1 ಯೋಹಾನ 5:19) ಎಂದಿದ್ದಾನೆ. **“ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆ ಎಂಬಾತನೇ”** (1 ಕೊರಿಂಥ 8:6) ಮತ್ತು **“ಈ ಭಾವದಿಂದ ನಾವು ದೇವರನ್ನು – ಅಪ್ಪಾ ತಂದೆಯೇ ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿಹೇಳುತ್ತಾನೆ”** (ರೋಮಾ. 8:15,16) ಎಂದು ಪೌಲನು ಹೇಳುವವನಾಗಿದ್ದಾನೆ. ನಮ್ಮ ಕರ್ತನು ಸಹಾ ತನ್ನ ಪುನರುತ್ಥಾನದ ನಂತರ ಇದೇ ವಿಷಯದಲ್ಲಿ ಸಾಕ್ಷಿ ಹೇಳುವವನಾಗಿ – **“ನಾನು ನನ್ನ ತಂದೆಯೂ ನಿಮ್ಮ**

**ತಂದೆಯೂ ನನ್ನ ದೇವರೂ, ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿಹೋಗುತ್ತೇನೆ"** (ಯೋಹಾನ : 20:17) ಎಂದಿದ್ದಾನೆ. ಯೋಹಾನನ ಸುವಾರ್ತೆಯು ಸಹಾ ಇದೇ ವಿಷಯವಾಗಿ ಸಾಕ್ಷಿಹೇಳುವಂತೆ – **"ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು. ಇವರು ರಕ್ತ ಸಂಬಂಧದಿಂದಾಗಲೀ, ಕಾಮದಿಂದಾಗಲೀ, ಪುರುಷಸಂಕಲ್ಪದಿಂದಾಗಲೀ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು"** (ಯೋಹಾನ 1:12,13) ಎಂದು ಹೇಳುತ್ತದೆ. ಅಪೋಸ್ತಲನಾದ ಯಾಕೋಬನು ಸಕಲವಿಧವಾದ ಬೆಳಕಿಗೆ ಮೂಲಕಾರಣನಾದವನ ಬಗ್ಗೆ ಪ್ರಕಟಿಸುವುದೇನೆಂದರೆ **"ಆತನು ತನ್ನ ಸುಚಿತ್ತದ ಪ್ರಕಾರ ಸತ್ಯಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ ನಾವು ಆತನ ಸೃಷ್ಟಿಗಳಲ್ಲಿ ಪ್ರಥಮಫಲದಂತಾದೆವು"** (ಯಾಕೋಬ 1:18) ಎಂಬುದಾಗಿ.

ನಿಜವಾಗಿಯೂ ಸಭೆಯ ಬಗ್ಗೆ ಎಲ್ಲಾ ಸಂಗತಿಗಳೂ ಸೂಚಿಸುವುದೇನೆಂದರೆ, ಸುವಾರ್ತಾ ಯುಗದ ನಂಬಿಗಸ್ತರು ಕ್ರಿಸ್ತನ ಮಕ್ಕಳಲ್ಲ, ಅವರು ಆತನ ತಂದೆಯ ಮಕ್ಕಳು ತಂದೆಯ ಆತ್ಮನಿಂದ, ತಂದೆಯ ಸ್ವಭಾವದಲ್ಲಿ ಪಡಕೊಂಡವರಾಗಿದ್ದು ಅವರುಗಳು ದೇವರ ವಾರಸುದಾರರು, ನಮ್ಮ ಕರ್ತನಾದ ಕ್ರಿಸ್ತನೊಂದಿಗೆ ಜೊತೆ ವಾರಸುದಾರರು ಎಂಬುದಾಗಿ. ಹೀಗಾದಲ್ಲಿ – **"ಕ್ರಿಸ್ತನಿಗೆ ಸಂಬಂಧಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು"** (ರೋಮಾ. 8:12).

ನಮ್ಮ ಕರ್ತನಾದ ಯೇಸುವಿನೊಂದಿಗೆ ನಮ್ಮ ಸಂಬಂಧವು ಅದಕ್ಕೆ ವ್ಯತಿರಿಕ್ತವಾಗಿದ್ದು ಅದನ್ನು ನಿಶ್ಚಿತವಾಗಿಯೂ, ಬಾರಿ ಬಾರಿಯಾಗಿಯೂ 'ಸಹೋದರರು' ಎಂಬುದಾಗಿ ಸೂಚಿಸಿರುವುದೇ ಹೊರತು ಆತನ ಮಕ್ಕಳೆಂದಲ್ಲ. ಸಭೆಯ ಬಗ್ಗೆ ಮಾತನಾಡುವಾಗ ಅಪೋಸ್ತಲನು ಹೇಳುವುದೇನೆಂದರೆ – **"ಆತನು ನಿಮ್ಮನ್ನು ತನ್ನ ಸಹೋದರರೆಂದು ಕರೆಯಲು ನಾಚಿಕೆಪಡದೆ "ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು; ಸಭಾ ಮಧ್ಯದಲ್ಲಿ ನಿನಗೆ ಸ್ತುತಿಪದಗಳನ್ನು ಹಾಡುವೆನು . . . ನಾನೂ ದೇವರು ನನಗೆ ದಯಪಾಲಿಸಿರುವ ಮಕ್ಕಳೂ (ದೇವರ) ಇದ್ದೇವೆ"** (ಇಬ್ರಿಯ 2:11–13) ಎಂಬುದಾಗಿ. ಅವರ ರಕ್ಷಣಾ ನಾಯಕನಾದ ಯೇಸುಕ್ರಿಸ್ತನ ನಾಯಕತ್ವದಲ್ಲಿ ತಂದೆಯು ಮಹಿಮೆಪಡಿಸುವ 'ಬಹು ಮಂದಿ' ಮಕ್ಕಳು ಇವರೇ. ಸಭೆಯ ಬಗ್ಗೆ ಪುನಃ ಹೇಳಿರುವುದೇನೆಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನು 'ತನ್ನ ಸಹೋದರರಲ್ಲಿ ಹಿರಿಯನು" ಎಂಬುದಾಗಿ – ರೋಮಾ. 8;29.

ಸಾಮಾನ್ಯವಾಗಿ ಲೋಕಕ್ಕೆ ಜೀವ ನೀಡುವ ಈ ಮಹಾ ಕಾರ್ಯವು ಜೀವದಾಯಕನ ದೇಹವು ಪೂರ್ಣ ಗೊಳ್ಳುವವರೆಗೆ, 'ಸಹೋದರರು' ತಮ್ಮ ಕರ್ತನೂ ವಿಮೋಚಕನೂ ಆದವನೊಂದಿಗೆ ಮಹಿಮೆಯ ಮಕ್ಕಳಾಗಿ ಸ್ವೀಕರಿಸಲ್ಪಟ್ಟು ಪುನಃವಶದ ಕಾರ್ಯಕ್ಕೆ ಪ್ರವೇಶಿಸುವವರೆಗೆ ಮುಂದೂಡಲ್ಪಟ್ಟಿತು. ದೇವರ ಚಿತ್ತಕ್ಕೆ ಇರುವ ನಂಬಿಕೆ ಮತ್ತು ನಿಷ್ಠೆಯನ್ನು ಈಗಾಗಲೇ ಪರೀಕ್ಷಿಸಲ್ಪಟ್ಟು ಅಂಗೀಕರಿಸಲ್ಪಟ್ಟ ಈ ಲೋಕಕ್ಕೆ ಸೇರಿದ ಪುರಾತನ ಪಿತೃಗಳ ಪ್ರಕರಣದಲ್ಲೂ ಜೀವ ನೀಡುವಿಕೆಯು ಪ್ರತಿಸಾಂಕೇತಿಕ ಮೋಶೆಯ ಸಭೆಯು (church) ಪೂರ್ಣಗೊಳ್ಳುವವರೆಗೆ ನೆರವೇರದು (ಅ.ಕೃ. 2:22,23) ಇಬ್ರಿಯ ಪತ್ರಿಕೆ 11:39–40ರಲ್ಲಿ ಬರೆದಿರುವಂತೆ – **"ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು"**.

ಕ್ರಿಸ್ತ ಯೇಸುವಿನಲ್ಲಿರುವ ವಿಮೋಚನೆಯ ಈ ದೃಷ್ಟಿಕೋನದಿಂದ ಆದಾಮನಿಂದ ಕಳಕೊಂಡ ಹಾಗೂ ಈ ರೀತಿಯಲ್ಲಿ ನಮ್ಮ ಕರ್ತನ ಮೂಲಕ ಪುನಃವಶಪಡಿಸಿಕೊಂಡ, ಆತನ ಅಮೂಲ್ಯ ರಕ್ತದಿಂದ ಕೊಂಡುಕೊಂಡ ಈ ಲೋಕದ ಒಡೆತನ ಅಥವಾ ಅಧಿಕಾರದ ದೃಷ್ಟಿಯಿಂದ ಕ್ರಿಸ್ತನು 'ಜೀವದಾಯಕ'ನು, ಮತ್ತು ನೂತನ ಒಡಂಬಡಿಕೆಯ ಷರತ್ತುಗಳಿಗನುಸಾರವಾಗಿ ಪುನಃ ಸಂಧಾನದ ಆಶೀರ್ವಾದಗಳನ್ನು ಹೊಂದಲಿರುವ ಆದಾಮನ ಸಂತಾನದವರೆಲ್ಲರ 'ತಂದೆ' ಎಂಬ ಕ್ರಿಸ್ತನ ಬಿರುದನ್ನು ನಾವು ನೋಡುವವರಾಗಿದ್ದೇವೆ ಮತ್ತು ಈ ದೃಷ್ಟಿಕೋನದಿಂದ ಮಾತ್ರವೇ ನಮ್ಮ ಕರ್ತನಾದ ಯೇಸುವು ಯಾವರೀತಿಯಲ್ಲಿ ದಾವೀದನ ಬುಡವೂ, ಸಂತತಿಯೂ, ದಾವೀದನ ಮಗನೂ, ದಾವೀದನ ತಂದೆಯೂ ಎರಡೂ ಆಗಿದ್ದಾನೆಂದು ನಾವು ನೋಡಬಹುದಾಗಿದೆ.

ಈ ಸಂಧರ್ಭದಲ್ಲಿ, ಈ ಲೋಕದ ಭಾಗವಾಗಿರುವ ಸುವಾರ್ತಾ ಯುಗದ ಸಭೆಯು **"ಶರೀರಭಾವದ ಆಶೆಗಳಿಗೆ** ಅಧೀನರಾಗಿ ಶರೀರಕ್ಕೂ, ಮನಸ್ಸಿಗೂ ಸಂಬಂಧಪಟ್ಟ

ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವ ಸಿದ್ಧವಾದ ದೇವರ ಕೋಪಕ್ಕೆ ಒಳಗಾಗಿ (ಎಫೆಸ 2:3)" **"ಕ್ರೋಧದ ಮಕ್ಕಳು"** ಆಗುವುದು ಹೇಗೆ ಸಾಧ್ಯ? ಮತ್ತು ಇತರರಂತೆ ಮಹಾ ಪಾಪನಿವೃತ್ತಿಯ ಅರ್ಹತೆಯ ಮೇರೆಗೆ ಪಾಪಕ್ಷಮಾಪಣೆಯನ್ನು ಹೊಂದಿಕೊಳ್ಳುವ ಅಗತ್ಯತೆ ಇರುವುದು ನ್ಯಾಯದ ಅರ್ಥದಲ್ಲಿ ನಮ್ಮನ್ನು ಈ ಲೋಕದವರಿಂದ ಪ್ರತ್ಯೇಕಿಸಿ ಭಿನ್ನರನ್ನಾಗಿ ಮಾಡಲಾದೀತೆ? ಈ ರೀತಿಯಲ್ಲಿ ದೇವರ ಮಕ್ಕಳು ಎಂದು ಕರೆದು ಹಾಗೂ ಅದೇ ಸಮಯದಲ್ಲಿ ಸಮಸ್ತ ಲೋಕವು ಜೀವದಾಯಕನಾದ ಕ್ರಿಸ್ತನ ಮಕ್ಕಳೆಂದು ಕರೆಸಿಕೊಳ್ಳಲು ಹೇಗೆ ಸಾಧ್ಯವಾದೀತು? ಎಂಬಿತ್ಯಾದಿಯಾಗಿ ವಿಚಾರಿಸಿಕೊಳ್ಳುವುದು ಉಚಿತವಾಗಿದೆ.

ಈ ಲೋಕವು ಯೇಸು ಕ್ರಿಸ್ತನು ಕೊಂಡುಕೊಂಡ ತನ್ನ ಮಾನವ ಜೀವಿತ ಹಕ್ಕನ್ನು ಹೊಂದಿದೆ ಮಾತ್ರವಲ್ಲ, ವಿಧೇಯ ಮಾನವ ಜಾತಿಯವರು ಆ ಕೊಂಡುಕೊಂಡ ಜೀವದ ಹಕ್ಕನ್ನು ಮಿಲಿಯಾಂತರ ಯುಗದ ಕ್ರಮೇಣವಾದ ಪ್ರಕ್ರಿಯೆಯಲ್ಲಿ ಪುನರ್‌ವಶ ಪಡಿಸಿಕೊಳ್ಳುವರು ಎಂಬ ಸತ್ಯದ ಮೇಲೆ ಈ ಭಿನ್ನತೆಯು ಆತುಕೊಂಡಿದೆ. ಅದಕ್ಕೆ ವಿರುದ್ಧವಾಗಿ ಸಭೆಯು ಅದರ ಕರ್ತನು ಅವರಿಗಾಗಿ ಕೊಂಡುಕೊಂಡ ಮಾನವ ಜೀವದ ಪುನರ್‌ವಶವನ್ನು ಹೊಂದಿಕೊಳ್ಳುವುದಿಲ್ಲ. ಪುನಃವಶಗೊಂಡ ಜೀವವು ಕೇವಲ ಈ ಸುವಾರ್ತಾ ಯುಗದ ವಿಶ್ವಾಸಿಗಳದ್ದೆಂದು ಎಣಿಕೆಯಾಗಿದೆ ಮತ್ತು ಆ ರೀತಿಯಲ್ಲಿ ಅವರು ನಂಬಿಕೆಯ ಮೂಲಕ ನೀತಿ ನಿರ್ಣಯಹೊಂದಿದ್ದಾರೆಂದು ಎಣಿಸಲ್ಪಟ್ಟಿದ್ದಾರೆ (ಅಥವಾ ಸಮರ್ಪಕರಾಗಿ, ಮಾನವರಾಗಿ ಪುನಃವಶ ಹೊಂದಿದ್ದಾರೆ)– ಆದರೆ ನಿಜವಾಗಿಯೂ ಅಲ್ಲ. ಈ ನಂಬಿಕೆಯ ಎಣಿಕೆಯಲ್ಲಿನ ಮಾನವ ಸಂಪೂರ್ಣತೆಯು ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಇದೆ ; ಅಂದರೆ, ಅಂಥವರು ಎಣಿಕೆಗೊಂಡ ಅಥವಾ ಆರೋಪಿಸಲ್ಪಟ್ಟ ಮಾನವ ಜೀವಿತವನ್ನು ಅದರ ಹಕ್ಕು ಮತ್ತು ಸವಲತ್ತುಗಳನ್ನು ದೇವರ ಸೇವೆಗಾಗಿ ತ್ಯಾಗಮಾಡಬಹುದು ಮತ್ತು ಅದರ ಬದಲಾಗಿ ದೈವಿಕ ಸ್ವಭಾವದಲ್ಲಿ ಪಾಲುಗೊಳ್ಳುವ ನಿರೀಕ್ಷೆಯನ್ನು ಹೊಂದಿಕೊಳ್ಳಬಹುದು.

ಈ ಲೋಕದ ಜೀವಿತ ಮತ್ತು ಈ ಲೋಕದ ಆಶೀರ್ವಾದಗಳನ್ನು ಆದಾಮನು ಕಳಕೊಂಡನು. ಇವುಗಳನ್ನೇ ಹೊರತು ಬೇರೆ ಯಾವುದನ್ನೂ ಅಲ್ಲ, ನಮ್ಮ ಕರ್ತನು ಮಾನವರಿಗಾಗಿ ಪುನಃ ವಶಪಡಿಸಿಕೊಂಡನು. ಪುನಃವಶದ ಸಮಯದಲ್ಲಿ ಬೇರೆ ಯಾರನ್ನೂ ಅಲ್ಲ ಇವರುಗಳನ್ನೇ ಆತನು ನಿಶ್ಚಯವಾಗಿ ಒಟ್ಟುಗೂಡಿಸುವನು. ಆದರೆ ಕ್ರಿಸ್ತನ ದೇಹ, ಕ್ರಿಸ್ತನ ಮದಲಗಿತ್ತಿಯಾದ ಸಭೆಯು ಮಾನವ ಜಾತಿಯಿಂದ 'ವಿಶೇಷವಾಗಿ ಆಯ್ಕೆಗೊಂಡ ವರ್ಗದವರಾಗಿ' ಮೊದಲಿಗೆ ಕರೆಯಲ್ಪಡುತ್ತದೆ. ಈ ಕರೆಯು ಅವರ ಕರ್ತನೂ ವಿಮೋಚಕನೂ ಆದ ಕ್ರಿಸ್ತನೊಂದಿಗೆ ಜೊತೆ ವಾರಸುದಾರರಾಗುವ 'ಪರಲೋಕದ ಕರೆ' ಇಲ್ಲವೆ 'ಉನ್ನತ ಕರೆ'ಯಾಗಿರುತ್ತದೆ. ಯೇಸು ಕ್ರಿಸ್ತನು ತನ್ನ ಸರ್ವ ಸಮರ್ಪಕವಾದ ಯಜ್ಞವನ್ನು ಅರ್ಪಿಸಿದಂತೆ, "ಮಾನವನಾದ ಯೇಸು ಕ್ರಿಸ್ತನು" ದೈವ ಸ್ವಭಾವವನ್ನು ಬಹುಮಾನವಾಗಿ ಪಡಕೊಂಡಂತೆ, ಈ ಸುವಾರ್ತಾ ಯುಗದ ನಂಬಿಗಸ್ಥರೂ ಸಹಾ ಅಸಮರ್ಪಕತೆಯಲ್ಲಿ ತಮ್ಮನ್ನು ದೇವರ ಬಲಿಪೀಠದಲ್ಲಿ ಅರ್ಪಿಸುವ ಅವಕಾಶ ಹೊಂದಿದ್ದಾರೆ. ಹೀಗೆ ಮಾಡುವವರು ಪವಿತ್ರಾತ್ಮನಿಂದ ಜನಿಸಿದವರಾಗಿ 'ನೂತನ ಸೃಷ್ಟಿಗಳು' 'ಮಹೋನ್ನತನ ಮಕ್ಕಳು' ಆಗಿ ಕ್ರಿಸ್ತನ ಸಹೋದರರೆಂಬಂತೆ, ಕ್ರಿಸ್ತನೇ ಮಹಾ ಯಾಜಕನಾಗಿರುವ ರಾಜವಂಶಸ್ಥ ಯಾಜಕವರ್ಗದ ಸದಸ್ಯರೆಂಬಂತೆ ಅಂಗೀಕರಿಸಲ್ಪಡುತ್ತಾರೆ.

ಮಿಲಿಯಾಂತರ ಯುಗದಲ್ಲಿರುವಂತೆ, ಇವರುಗಳು ತಂದೆಯಿಂದ ಸೆಳೆಯಲ್ಪಟ್ಟವರೇ ಹೊರತು ಮಗನಿಂದಲ್ಲ ಯೋಹಾನ 6:44 ಮತ್ತು 12:32 ಇವುಗಳನ್ನು ಹೋಲಿಕೆ ಮಾಡಿರಿ) ತಂದೆಯು ಕ್ರಿಸ್ತನಿಗಾಗಿ ಎಳೆಯಲ್ಪಟ್ಟವರನ್ನು, ಆತನು ಒಬ್ಬ ಹಿರಿಯಣ್ಣನಾಗಿ, ಅವರುಗಳನ್ನು ತನ್ನ ಸಹೋದರರಂತೆ ಸ್ವೀಕರಿಸುತ್ತಾನೆ ಮತ್ತು ಅವರನ್ನು ಸ್ವಯಂ ಅರ್ಪಣೆಯ ಇಕ್ಕಟ್ಟಾದ ಹಾದಿಯಲ್ಲಿ ಮರಣದ ಪರ್ಯಂತ ಆತನ ಹೆಜ್ಜೆಜಾಡಿನಲ್ಲಿ ನಡೆಯುವಂತೆ ಅವರಿಗೆ ನೆರವಾಗುತ್ತಾನೆ. ಈ ರೀತಿಯಲ್ಲಿ ಅವರು ಆತನೊಂದಿಗೆ ಮರಣ ಹೊಂದಿಕೊಳ್ಳುವರು ಮತ್ತು ಆತನೊಂದಿಗೆ ಜೊತೆ ತ್ಯಾಗಿಗಳಾಗಿ ಎಣಿಸಲ್ಪಡುವರು ಮತ್ತು ಈ ರೀತಿಯಾಗಿ ಅವರು ದೇವರ ರಾಜ್ಯದಲ್ಲಿ, ಮತ್ತು ಅದರ ಕಾರ್ಯಗಳಲ್ಲಿ ಆತನೊಂದಿಗೆ ಜೊತೆ ವಾರಸುದಾರರಾಗಲು ಅರ್ಹರೆಂದು ಎಣಿಸಲ್ಪಡುವರು. ಈ ರೀತಿಯಲ್ಲಿ ಆ ರಾಜ್ಯದ ಆಶೀರ್ವಾದಗಳನ್ನು, ನಿತ್ಯಜೀವವನ್ನು ಸ್ವೀಕರಿಸುವ ಅದೆಷ್ಟೋ ಮಂದಿ ಹೊಂದಿಕೊಳ್ಳುವರು. ಇವರುಗಳು "ಕ್ರಿಸ್ತನ ಸಂಕಟದೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ತಮ್ಮ ಶರೀರದಲ್ಲಿ ಅನುಭವಿಸಬೇಕಾಗುತ್ತದೆ" "ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು" (ಕೊಲೊಸ್ಸೆ 1:24; 2 ತಿಮೋ. 2:12). ಈ ರೀತಿಯಲ್ಲಿ ಸಭೆಯ ಪರಿಸ್ಥಿತಿಯು ಈ ಲೋಕದ ಸಾಮಾನ್ಯ ಪರಿಸ್ಥಿತಿಗಿಂತ ವಿಭಿನ್ನವಾಗಿದೆ. ಯಾಕೆಂದರೆ

ಅವರ ಕರೆಯು 'ಮಹಾ ಕರೆ'ಯಾಗಿದೆ, ಪರಲೋಕದ ಕರೆಯಾಗಿದೆ ಮತ್ತು ಅದರ ವಾಗ್ದಾನಗಳು ದೈವಿಕ ಸ್ವಭಾವವುಳ್ಳವುಗಳಾಗಿವೆ – 2 ಪೇತ್ರ 1:4.

ಅಪೋಸ್ತಲನು ಹೇಳುವಂತೆ ಇದೊಂದು ಮಹತ್ತರವಾದ ಧಾರ್ಮಿಕ ಸತ್ಯ ಅಥವಾ ರಹಸ್ಯವಾಗಿದೆ. ಈ ಕೀಲಿ ಕೈಯ ಹೊರತಾಗಿ ದೈವಿಕ ವಾಕ್ಯದ ಪ್ರಪಂಚದ ವಾಗ್ದಾನಗಳನ್ನು, ಪ್ರವಾದನೆಗಳನ್ನು ಅರಿತುಕೊಳ್ಳಲು ಸಾಧ್ಯವಿಲ್ಲ (ಕೊಲೊಸ್ಸೆ 1:26 ನೋಡಿರಿ). ಪರಲೋಕದ ತಂದೆಯು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾದ ಮಾನವ ಜನಾಂಗದ ಸೃಷ್ಟಿಯನ್ನು ಭೂಮಿಯಿಂದಲೇ ನೆರವೇರಿಸಲು ತನ್ನಲ್ಲಿಯೇ ಸಂಕಲ್ಪಿಸಿದನು ಮತ್ತು ಇದಕ್ಕಾಗಿ ಈ ಲೋಕದಲ್ಲಿ ಪರದೈಸಿನ ಸ್ಥಿತಿಯೊಂದನ್ನು ಉಂಟುಮಾಡಿದನು. ಆದರೆ, ಇದರ ಪತನದ ಫಲವೇನಾಗಬಹುದೆಂದು, ಮತ್ತು ದೇವರ ನ್ಯಾಯವನ್ನು, ಪ್ರೀತಿಯನ್ನು, ದೈವಿಕ ಜ್ಞಾನವನ್ನು ಮತ್ತು ದೈವಿಕ ಶಕ್ತಿಯನ್ನು ಪ್ರಕಟಿಸಬೇಕಾಗುವುದನ್ನು ಆತನು ಮುಂಚಿತವಾಗಿಯೇ ತಿಳಿದಿದ್ದನು. ಆತನು ಅದನ್ನು ತನ್ನ ಒಬ್ಬನೇ ಪಡೆದಾತನಾದ ಮಗನ ಮೂಲಕ ಮೊದಲೇ ಸಿದ್ಧಪಡಿಸಿದ್ದನು. ವಾಕ್ಯ(ಲೋಗೋಸ್)ವೆಂಬಾತನು ತನ್ನ ಸ್ವಾಮಿಭಕ್ತಿಯನ್ನು ತನ್ನ ತಂದೆಗೂ, ನೀತಿವಂತಿಕೆಯ ತತ್ವಗಳಿಗೂ ಮಾನವ ಜಾತಿಯುನ್ನು ವಿಮೋಚಿಸುವುದರ ಮೂಲಕ ರುಜುವಾತುಪಡಿಸುವ ಅವಕಾಶವನ್ನು ಒದಗಿಸಿದನು ಮತ್ತು ಈ ರೀತಿಯಲ್ಲಿ ಆತನು ದೈವಿಕ ಕೃಪೆಯ ಎಲ್ಲಾ ಶ್ರೀಮಂತಿಕೆಗಳಿಗೆ ವಾರಸುದಾರನಾದನು ಮತ್ತು ತಂದೆಯ ನಂತರ ಎಲ್ಲವುಗಳ ಮುಖ್ಯಸ್ಥನೂ ಆದನು. ಎಲ್ಲಾ ಸಂಗತಿಗಳಲ್ಲಿ ಆತನಿಗೆ ಪ್ರಾಬಲ್ಯತೆ ಒದಗಿ ಬಂತು. ಈ ರೀತಿಯಲ್ಲಿ ಮಾನವ ಜಾತಿಯ ಪ್ರಪಂಚವು ಸಾಧಾರಣವಾಗಿ ಅವರ ವಿಮೋಚಕನಿಂದ ಉದ್ಧಾರಗೊಳ್ಳುವಂಥಃ ವಿನ್ಯಾಸವನ್ನು ದೇವರು ಸಿದ್ಧಪಡಿಸಿದನು ಮತ್ತು ಆತನು 'ಚಿಕ್ಕ ಹಿಂಡಿನ' ಗುಣಲಕ್ಷಣಕ್ಕನುಸಾರವಾಗಿ ಮತ್ತು ಅವರ ಪ್ರಮಾಣಿಕತೆಗನುಸಾರವಾಗಿ ದೇವದೂತರುಗಳಿಗಿಂತಲೂ, ರಾಜ್ಯಗಳ ಮತ್ತು ಅಧಿಕಾರಗಳಿಗಿಂತಲೂ ಎಷ್ಟೋ ಮಿಗಿಲಾಗಿ ಅವರನ್ನು ತನ್ನ ಏಕೈಕ ಪಡೆದಾತನ ಮತ್ತು ತನ್ನ ರಾಜ್ಯದಲ್ಲಿ ಆತನ ಸಂಗಡಿಗರೆಲ್ಲರ ಜೊತೆವಾರಸುದಾರರು ಗಳನ್ನಾಗಿ ಆಯ್ಕೆಮಾಡುವವನಾದನು.

ಈ ರೀತಿಯಲ್ಲಿ, ಅಪೋಸ್ತಲನು ಪ್ರಕಟಿಸಿ ಹೇಳುವುದೇನೆಂದರೆ, **"ನಾವು ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ . . . . ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಲ್ಪಟ್ಟಿದ್ದೇವೆ"** (1 ಪೇತ್ರ 1:2). ಅಪೋಸ್ತಲನಾದ ಪೌಲನು ಈ ಆಲೋಚನೆಯನ್ನು ಪುಷ್ಟೀಕರಿಸುವಂತೆ – **"ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯದಲ್ಲಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಆತನು ನಿಮ್ಮ ಮನೋ ನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬುದನ್ನು ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದು ದೆಂಬುದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ. ಆತನ ಬಲಾತಿಶಯವು ಎಷ್ಟು ಮಹತ್ತಾದದೆಂಬುದು ಕ್ರಿಸ್ತನಲ್ಲಿ ತೋರಿಬಂದಿದೆ"**. ನಮ್ಮ ಕಡೆಗೆ ಈ ಕರುಣೆಯು ನಾವು ಇದಕ್ಕೆ ಅರ್ಹವಾದುದನ್ನೇನೂ ಮಾಡದೇ ಪ್ರಾಪ್ತವಾಗಿದೆ. **"ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು . . . ಕ್ರಿಸ್ತಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ . . . ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು"** – ಎಫೆಸ 1:17–20, 2:4–10.

* * * * * *